# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/580/2022/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು
ದಿನಾಂಕ: 07.01.2023.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ. ಚಂದ್ರಕುಮಾರ್, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್, ವಿರಾಜಪೇಟೆ, ಕೊಡಗು ಜಿಲ್ಲೆ ಹಾಗೂ (2) ಶ್ರೀ.ಎಂ.ಎಂ.ಶ್ರೀಧರ್, ಹಿಂದಿನ ಮುಖ್ಯಾಧಿಕಾರಿ, ಪುರಸಭೆ, ವೀರಾಜಪೇಟೆ, ಪ್ರಸ್ತುತ ಶ್ರೀ ರಾಮಪುರ ನಗರಸಭೆ, ಮೈಸೂರು ಜಿಲ್ಲೆ ರವರುಗಳು ಸರ್ಕಾರಿ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ. ಟಿ.ವಿ ಅನಿಲ್ ಕುಮಾರ್, ಅಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ, ಎಫ್.ಎಂ.ಸಿ ರಸ್ತೆ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ (ಇನ್ನು ಮುಂದೆ ದೂರುದಾರರೆಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ. ಚಂದ್ರಕುಮಾರ್, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್, ವಿರಾಜಪೇಟೆ, ಕೊಡಗು ಜಿಲ್ಲೆ (2) ಶ್ರೀ. ಸೋಮೇಶ್, ಕಂದಾಯ ಅಧಿಕಾರಿ, ಪಟ್ಟಣ ಪಂಚಾಯತ್, ವಿರಾಜಪೇಟೆ, ಕೊಡಗು ಜಿಲ್ಲೆ ಹಾಗೂ (3) ಶ್ರೀ.ಎಂ.ಎಂ.ಶ್ರೀಧರ್, ಹಿಂದಿನ ಮುಖ್ಯಾಧಿಕಾರಿ, ಪುರಸಭೆ, ವೀರಾಜಪೇಟೆ, ಪ್ರಸ್ತುತ ಶ್ರೀರಾಮಪುರ ನಗರಸಭೆ, ಮೈಸೂರು ಜಿಲ್ಲೆ (3ನೇ ಎದುರುದಾರರನ್ನು ತನಿಖೆಯ ಕಾಲಕ್ಕೆ ಸೇರ್ಪಡೆಗೊಳಿಸಲಾಗಿದೆ) (ಇನ್ನು

ಮುಂದೆ ಕ್ರಮವಾಗಿ 1 ರಿಂದ 3ನೇ ಎದುರುದಾರರೆಂದು ಕರೆಯಲ್ಪಡುತ್ತಾರೆ) ಇವರುಗಳ ವಿರುದ್ಧ ದೂರು ಸಲ್ಲಿಸಿರುತ್ತಾರೆ.

2. ದೂರುದಾರರು ತಮ್ಮ ದೂರಿನಲ್ಲಿ ವಿರಾಜಪೇಟೆ ಪಟ್ಟಣ ಪಂಚಾಯಿತಿಯಲ್ಲಿ ಪೀಠೋಪಕರಣಗಳ ಖರೀದಿಗೆ ಸಂಬಂಧಿಸಿದಂತೆ ಕೌನ್ಸಿಲ್ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ಕೈಗೊಳ್ಳದೇ ಪೀಠೋಪಕರಣ ಖರೀದಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ಎಸ್.ಆರ್ ದರಗಳು ಲಭ್ಯವಿದ್ದರೂ ಸಹ ಪರಿಗಣಿಸದೇ ಧರಪಟ್ಟಿಗಳ ಕೊಟೇಷನ್‌ಗಳನ್ನು ಆಹ್ವಾನಿಸದೇ ಉಲ್ಲಂಘನೆ ಮಾಡಿ ಖರೀದಿ ಮಾಡಿರುವುದು ಕಂಡುಬರುತ್ತದೆ. ಪಟ್ಟಣ ಪಂಚಾಯತ್ ವತಿಯಿಂದ ಚೇರ್, ವುಡನ್ ಬೇಸ್ ಟೇಬಲ್, ಸೀಟರ್ ಸ್ಪೆಷಲ್ ಚೇರ್, ಮೂರು ಸೀಟರ್‌ಗಳನ್ನು 4 ಪಟ್ಟು ಹೆಚ್ಚಿನ ದರಕ್ಕೆ ಖರೀದಿ ಮಾಡಿದ್ದು, ಪಟ್ಟಣ ಪಂಚಾಯತ್ ಬೊಕ್ಕಸಕ್ಕೆ ನಷ್ಟವುಂಟು ಮಾಡಿರುವುದರಿಂದ ಎದುರುದಾರರ ವಿರುದ್ಧ ತನಿಖೆ ಮಾಡಿ ಸೂಕ್ತ ಕ್ರಮ ಜರುಗಿಸಲು ಕೋರಿ ದೂರು ಸಲ್ಲಿಸಿರುತ್ತಾರೆ.

3. **ಎದುರುದಾರರಿಂದ ದಿ:12/04/2022 ರಂದು ಆಕ್ಷೇಪಣೆ ಸ್ವೀಕರಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ವಿರಾಜಪೇಟೆ ಪಟ್ಟಣ ಪಂಚಾಯಿತಿಗೆ ಪೀಠೋಪಕರಣಗಳನ್ನು ಹೊಸದಾಗಿ ಖರೀದಿಸಲು ಸಾಮಾನ್ಯ ಸಭೆಯ ನಡಾವಳಿ ಸಂಖ್ಯೆ:15, ದಿ:12/04/2021 ರಂದು ನಿರ್ಣಯ ತೆಗೆದುಕೊಳ್ಳಲಾಗಿರುತ್ತದೆ.

4. ಟೆಂಡರ್ ಪ್ರಕಟಣೆಯಲ್ಲಿ ವಿವರಿಸಿರುವ ಪೀಠೋಪಕರಣಗಳಿಗೆ ಲೋಕೋಪಯೋಗಿ ಇಲಾಖೆಯ ಎಸ್.ಆರ್.ದರಗಳು ಲಭ್ಯವಿಲ್ಲದೇ

ಇರುವುದರಿಂದ ಎರಡೂ ಪತ್ರಿಕೆಗಳಲ್ಲಿ ದರ ಆಹ್ವಾನಿಸಿ ಟೆಂಡರ್ ಗಳನ್ನು ಕರೆದಿರುವುದಾಗಿರುತ್ತದೆ.

5. ಕಛೇರಿ ಮುಖ್ಯಸ್ಥರ ಸೂಚನೆ ಮೇರೆಗೆ ಕಂದಾಯ ನಿರೀಕ್ಷಕರು, ಕಡತವನ್ನು ಸಿದ್ದಪಡಿಸಿದ್ದು, ಕ್ರಮಬದ್ಧ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ. ಸಿವಿಲ್ ಕಾಮಗಾರಿ ಅಳತೆ ಪ್ರಮಾಣ ಹೊರತುಪಡಿಸಿ ಕಾಮಗಾರಿಯಾಗಿರುವುದರಿಂದ ಕಿರಿಯ ಅಭಿಯಂತರರ ಮೂಲಕ ಪ್ರಕ್ರಿಯೆಯನ್ನು ಕೈಗೊಂಡಿರುವುದಿಲ್ಲ.

6. ಕರ್ನಾಟಕ ಸರ್ಕಾರದ ಸುತ್ತೋಲೆ ದಿ:09/10/2012 ಹಾಗೂ ಪೌರಾಡಳಿತ ನಿರ್ದೇಶಕರ ಸುತ್ತೋಲೆ ದಿ:27/11/2012 ರನ್ವಯ 5 ಲಕ್ಷಕ್ಕೆ ಮೀರಿದ ಎಲ್ಲಾ ಸಂಗ್ರಹಣೆಯನ್ನು ವಿದ್ಯುದ್ಮಾನ ಸಂಗ್ರಹಣಾ ವೇದಿಕೆಯ ಮುಖಾಂತರ ಕರೆಯಬೇಕೆಂದು ಸುತ್ತೋಲೆ ಇರುತ್ತದೆ. ಆದ್ದರಿಂದ, 5 ಲಕ್ಷದ ಒಳಗಿನ ಕಾಮಗಾರಿಗಳನ್ನು ಮ್ಯಾನುವಲ್ ಟೆಂಡರ್ ಕೆ.ಡಬ್ಲ್ಯೂ-1 ಮುಚ್ಚಿನ ಲಕೋಟೆ ಮುಖಾಂತರ ಕೈಗೊಳ್ಳಲಾಗಿರುತ್ತದೆ. ದಿ:30/09/2021 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಸದರಿ ಟೆಂಡರ್ ಧರವನ್ನು ಅಂಗೀಕರಿಸಲಾಗಿರುತ್ತದೆ.

7. ಪೀಠೋಪಕರಣ ಖರೀದಿ ಮಾಡಿ ಬಿಲ್ ಸಂದಾಯವಾಗುವ ಮುನ್ನ ಅಧ್ಯಕ್ಷರು ಹಾಗೂ ಸ್ಥಾಯಿ ಸಮಿತಿಯ ಅಧ್ಯಕ್ಷರ ಅನುಮತಿ ಪಡೆದುಕೊಂಡು ನಂತರ ಸಾಮಗ್ರಿಗಳ ಗುಣಮಟ್ಟದ ವರದಿಯನ್ನು ಕ್ಯಾಡ್ ಸ್ಟೇಷನ್ ಟೆಕ್ನಾಲಾಜಿಸ್ ಪ್ರೈ.ಲಿ., ಮೈಸೂರು ಇವರಿಂದ ಗುಣಮಟ್ಟದ ವರದಿಯನ್ನು ಪಡೆದುಕೊಂಡು ಬಿಲ್ಲನ್ನು ಪಾವತಿಸಲಾಗಿರುತ್ತದೆ. ಕಾನೂನುಬದ್ಧವಾಗಿ ಅತೀ ಕನಿಷ್ಟ ಕಡಿಮೆ ಧರವನ್ನು ನಮೂದಿಸಿರುವ ಸರಬರಾಜುದಾರರಿಗೆ ಆದೇಶ

ನೀಡಲಾಗಿರುತ್ತದೆ. ಅದರನ್ವಯ ರೂ.4,71,812/- ಗಳಿಗೆ ಪೀಠೋಪಕರಣಗಳನ್ನು ಖರೀದಿಸಿ ವೆಚ್ಚವನ್ನು ಅನುಮೋದಿಸಿದ ನಂತರ ಬಿಲ್ಲನ್ನು ಸಂದಾಯ ಮಾಡಲಾಗಿರುತ್ತದೆ ಎಂಬಂತೆ ಆಕ್ಷೇಪಣೆ ಸಲ್ಲಿಸಿರುತ್ತಾರೆ.

**8. ದಿ:10-05-2022ರಂದು ದೂರುದಾರರಿಂದ ಪ್ರತ್ಯುತ್ತರ ಸ್ವೀಕರಿಸಿದ್ದು,** ತಮ್ಮ ಪ್ರತ್ಯುತ್ತರದಲ್ಲಿ ವಿರಾಜಪೇಟೆ ಪಟ್ಟಣ ಪಂಚಾಯ್ತಿ ಕಛೇರಿಗೆ ಸಂಬಂಧಿಸಿದಂತೆ ಸಾಮಾನ್ಯ ಸಭೆಯ ದಿ:30-09-2021ರಂದು ಗುರುವಾರ ಎಂದು ನಮೂದಿಸಿದ್ದು, ವಿಶೇಷ ಸಾಮಾನ್ಯ ಸಭೆಯ ನಡವಳಿ ದಿ:30-09-2021 ಎಂದು ನಮೂದಿಸಿ ಮಂಗಳವಾರ ಎಂದು ದಾಖಲಿಸಿರುತ್ತಾರೆ. ಒಂದೇ ದಿನಾಂಕದಲ್ಲಿ ವ್ಯತ್ಯಾಸ ಇರುತ್ತದೆ. ಇದರಿಂದ ದಾಖಲೆಗಳನ್ನು ಸೃಷ್ಟಿಸಿರುವುದು ಕಂಡುಬರುತ್ತದೆ. ಪೀಠೋಪಕರಣಗಳಿಗೆ ಸ್ಥಳೀಯ ಸರಬರಾಜುದಾರರಾದ ಮೆ:: ಕೂರ್ಗ್ ಹೈಲೈಟ್ ಫರ್ನೀಚರ್ಸ್, ವಿರಾಜಪೇಟೆ ಇವರಿಂದ ದಿ:7-5-2022ರಲ್ಲಿ ಪಡೆದಿರುವ ಬ್ಯಾಂಡೆಡ್ ಗುಣಮಟ್ಟದ ಸಾಮಗ್ರಿಗಳ ಕೊಟೇಷನಲ್ಲಿ ಜಿಎಸ್.ಟಿ ಸೇರಿ ದರಗಳನ್ನು ನಮೂದಿಸಲಾಗಿರುತ್ತದೆ. ಸ್ಥಳೀಯ ಕೊಟೇಷನದಲ್ಲಿ ರೂ.1,95,300/- ಗಳಾಗುತ್ತಿದ್ದು, ಎದುರುದಾರರು ಖರೀದಿಸಿರುವ ಪಿಠೋಪಕರಣಗಳ ಮೊತ್ತ ರೂ.4,71,812/-ಗಳನ್ನು ಪಾವತಿಸಿದ್ದು, ಇವುಗಳನ್ನು ಹೋಲಿಸಿದರೆ ರೂ.2,97,000/-ಗಳನ್ನು ಪಟ್ಟಣ ಪಂಚಾಯ್ತಿಗೆ ನಷ್ಟವುಂಟು ಮಾಡಿದ್ದಲ್ಲದೇ ಸಾರ್ವಜನಿಕರ ಹಣವನ್ನು ದುರುಪಯೋಗಪಡಿಸಿಕೊಂಡತಾಗಿರುತ್ತದೆ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

**9. ಎದುರುದಾರರಿಂದ ದಿ:15-07-2022 ರ ಪತ್ರ ಸ್ವೀಕರಿಸಿದ್ದು,** ತಮ್ಮ ಪತ್ರದಲ್ಲಿ ವಿರಾಜಪೇಟೆ ಪಟ್ಟಣ ಪಂಚಾಯತಿಯ ಕಿರಿಯ ಅಭಿಯಂತರರು, ತಮ್ಮ ಕರ್ತವ್ಯವನ್ನು ಹೆಚ್ಚುವರಿಯಾಗಿ ಸೋಮವಾರ ಪೇಟೆ, ಮಡಿಕೇರಿ ಮತ್ತು ವಿರಾಜಪೇಟೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರಿಂದ ಅವರ ಲಭ್ಯತೆಯು 2 ದಿನಗಳ ಅವಧಿಗೆ ಆಗಿದ್ದರಿಂದ ಪೀಠೋಪಕರಣ ಖರೀದಿಯ ಜವಾಬ್ದಾರಿಯನ್ನು ಕಛೇರಿಯ ಆದೇಶ ದಿ:23-05-2021 ರಂತೆ ವಿ.ಕೆ.ಸೋಮಶೇಖರ, ಕಂದಾಯ ನಿರೀಕ್ಷಕರಿಗೆ ವಹಿಸಲಾಗಿರುತ್ತದೆ.

10. ಪೀಠೋಪಕರಣ ಖರೀಧಿಗೆ ಟೆಂಡರನ್ನು ದಿ:25-05-2021 ರಂದು ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸಿ ದಿ:02-06-2021 ರಂದು ಅವಧಿಯನ್ನು ನಿಗಧಿಪಡಿಸಿದ್ದು, ಇ.ಎಂ.ಡಿ.ಯೊಂದಿಗೆ ದರವನ್ನು ಟೆಂಡರ್ ಮೂಲಕ ಸಲ್ಲಿಸಲು ಅವಕಾಶ ನೀಡಲಾಗಿದ್ದು, ಇ.ಎಂ.ಡಿ. ಪಾವತಿಸಿ ಟೆಂಡರ್‌ನಲ್ಲಿ ಭಾಗವಹಿಸಿದವರ ದರವನ್ನು ಮಾತ್ರ ಪರಿಗಣಿಸಲಾಗಿರುತ್ತದೆ. ದೂರುದಾರರ ಹೇಳಿಕೆಯಂತೆ ಕೂರ್ಗ್/ಅವೆನ್ಯು ರವರ ಅಧಿಕೃತವಾಗಿ ಟೆಂಡರ್‌ನಲ್ಲಿ ಭಾಗವಹಿಸದೆ ಇರುವುದರಿಂದ ಅವರ ದರವನ್ನು ಪರಿಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ ಎಂಬಂತೆ ಪೂರ್ವಕ ಉತ್ತರಗಳನ್ನು ಸಲ್ಲಿಸಿರುತ್ತಾರೆ.

11. **ದಿ:07-07-2022ರ ತನಿಖಾ ವರದಿಯನ್ನು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಡಿಕೇರಿ ರವರಿಂದ ಸ್ವೀಕರಿಸಿದ್ದು,** ತಮ್ಮ ತನಿಖಾ ವರದಿಯಲ್ಲಿ ವಿರಾಜಪೇಟೆ ಪಟ್ಟಣ ಪಂಚಾಯಿತಿಯ ಕಛೇರಿ ಹಾಗೂ ಟೌನ್‌ಹಾಲ್‌ಗೆ ಟೇಬಲ್ ಕುರ್ಚಿಗಳನ್ನು ದುರಸ್ಥಿ ಹಾಗೂ ಸರಬರಾಜು ಮಾಡುವ ಬಗ್ಗೆ ಚರ್ಚಿಸತಕ್ಕ

ವಿಚಾರ, ತೀರ್ಮಾನ ವಿರಾಜಪೇಟೆ ಪಟ್ಟಣ ಪಂಚಾಯಿತಿಯ ಕಛೇರಿ ಮತ್ತು ಟೌನ್ ಹಾಲ್‌ಗೆ ಟೇಬಲ್ ಕುರ್ಚಿಯನ್ನು ದುರಸ್ಥಿ ಹಾಗೂ ಸರಬರಾಜು ಮಾಡುವ ಬಗ್ಗೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು ಎಂಬ ಬಗ್ಗೆ ವರದಿ ನೀಡಿರುತ್ತಾರೆ. ಆದರೆ ಪಟ್ಟಣ ಪಂಚಾಯಿತಿಯ ದಿ: **15/4/2021ರ ಸಭಾ ನಡಾವಳಿ ಪುಸ್ತಕವನ್ನು ಪರಿಶೀಲಿಸಲಾಗಿ** ಆ ದಿವಸ ಒಟ್ಟು 15 ವಿಷಯಗಳ ಬಗ್ಗೆ ನಮೂದು ಇದ್ದು, ಪೀಠೋಪಕರಣ ಖರೀದಿ ವಿಚಾರವನ್ನು ವಿಷಯ ಸಂಖ್ಯೆ-15ರಲ್ಲಿ ಕಡೆಯದಾಗಿ ನಮೂದಿಸಿರುವುದು ಕಂಡು ಬಂದಿರುತ್ತದೆ. ನಡಾವಳಿ ಪುಸ್ತಕದಲ್ಲಿ ಅಧ್ಯಕ್ಷರು ಮಾತ್ರ ಸಹಿ ಮಾಡುವ ಕ್ರಮ ಕಂಡು ಬಂದಿದ್ದು, ಉಳಿದಂತೆ ಸದಸ್ಯರುಗಳು ಪ್ರತ್ಯೇಕ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡುವ ವ್ಯವಸ್ಥೆ ಇರುತ್ತದೆ. ಆದರೆ ಮಾನ್ಯ ಲೋಕಾಯುಕ್ತರಿಗೆ ಸಲ್ಲಿಸಿದ ವರದಿಯಲ್ಲಿ ಎಲ್ಲಾ ಸದಸ್ಯರು ಹಾಜರಿ ಎಂಬ ಬಗ್ಗೆ ವರದಿ ನೀಡಿದ್ದು, ಆದರೆ, ಹಾಜರಾತಿ ಪುಸ್ತಕದಲ್ಲಿ ಅದ್ಯಕ್ಷರು, ಉಪಾಧ್ಯಕ್ಷರು, 3 ಜನ ಸದಸ್ಯರು ಮತ್ತು 3 ಜನ ನಾಮ ನಿರ್ದೇಶನ ಸದಸ್ಯರು ಸಹಿ ಮಾಡಿರುವುದಿಲ್ಲ.

12. ದಿ: 30/9/2021ರ ಸಭಾ ನಡಾವಳಿ ಪುಸ್ತಕವನ್ನು ಪರಿಶೀಲಿಸಲಾಗಿ ವಿಷಯ ಸಂಖ್ಯೆ 2 ರಲ್ಲಿ ಏಪ್ರಿಲ್, ಮೇ, ಜೂನ್, ಜುಲೈ, ಅಗಸ್ಟ್ 2021ರ ಮಾಹೆಯ ಜಮೆ ಮತ್ತು ಖರ್ಚನ್ನು ಸ್ಥಿರೀಕರಿಸುವ ಬಗ್ಗೆ ಚರ್ಚಿಸತಕ್ಕ ವಿಚಾರ ಎಂಬುದಾಗಿದ್ದು, ತೀರ್ಮಾನದಲ್ಲಿ ಬೇರೆ ಬೇರೆ ವಿಚಾರಗಳ ಬಗ್ಗೆ ಪ್ರಸ್ತಾಪಿಸಿದ್ದು, ಕೊನೆಯಲ್ಲಿ ನಂತರ ಜಮೆ ಖರ್ಚನ್ನು ಸ್ಥಿರೀಕರಿಸಿ ಅಂಗೀಕರಿಸಲಾಯಿತು ಎಂಬುದಾಗಿರುತ್ತದೆ. ನಂತರ ಮೆ॥ ಗ್ಲಾಸ್

ಜೋನ್ ಪ್ರೋಜೆಕ್ಟ್, ಬೆಂಗಳೂರು ಇವರು ಮೇಜು ಮತ್ತು ಕುರ್ಚಿಯನ್ನು ಖರೀದಿಸಿದ ಬಿಲ್ಲನ್ನು ಜಮೆ ಖರ್ಚಿನಲ್ಲಿ ಅಂಗೀಕರಿಸಿ ಅನುಮೋದನೆ ನೀಡಿ ಸಭೆಯಲ್ಲಿ ತೀರ್ಮಾನಿಸಲಾಯಿತು ಎಂಬುದಾಗಿ ನಂತರ ಸೇರಿಸಿರುವುದು ಕಂಡು ಬಂದಿರುತ್ತದೆ.

13. **ಸಭೆಯ ನಡಾವಳಿಯ ವಿಷಯ ಸಂಖ್ಯೆ 15 ರಲ್ಲಿ 2021-22ನೇ ಸಾಲಿನ ಶೇ5%ರ** ಯೋಜನೆಯಡಿ ಅಂಗವಿಕಲತೆಯ ಪೋಷಣಾ ವೆಚ್ಚಕ್ಕೆ ಬಂದಿರುವ ಅರ್ಜಿಗಳ ವಿಚಾರ ಇದ್ದು, ಇಲ್ಲೂ ಮೇಜು ಮತ್ತು ಕುರ್ಚಿ ಖರೀದಿ ವಿಚಾರವನ್ನು ಸೇರಿಸಿ ಬರೆದಿದ್ದು, ಅಲ್ಲದೇ ತೀರ್ಮಾನದಲ್ಲಿ ಕೊನೆಯಲ್ಲಿ ವಿರಾಜಪೇಟೆ ಪಟ್ಟಣ ಪಂಚಾಯಿತಿಯ ಕಛೇರಿ ಹಾಗೂ ಟೌನ್ ಹಾಲ್‌ಗೆ ಟೇಬಲ್ ಹಾಗೂ ಕುರ್ಚಿಯನ್ನು ದುರಸ್ಥಿ ಹಾಗೂ ಸರಬರಾಜು ಮಾಡುವ ಬಗ್ಗೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಹಾಗೂ ಬಿಲ್ಲನ್ನು ಪಾವತಿಸುವ ಬಗ್ಗೆ ಒಪ್ಪಲಾಯಿತು ಎಂಬುದಾಗಿ ಸೇರಿಸಿರುವುದು ಕಂಡು ಬಂದಿರುತ್ತದೆ.

14. 4 ತಿಂಗಳ ಖರ್ಚು ವೆಚ್ಚದ ಪಟ್ಟಿ ಇದ್ದು, ಸದರಿ ಪಟ್ಟಿಯಲ್ಲಿ ನೂರಾರು ಖರ್ಚುವೆಚ್ಚದ ವಿವರಗಳಿದ್ದರೂ, ಅವುಗಳನ್ನು ಯಾವುದನ್ನು ಪ್ರಸ್ತಾಪಿಸಿ ನಮೂದಿಸದೇ, ಈ ವಿಷಯವನ್ನು ಮಾತ್ರ ಎರಡೆರಡು ಬಾರಿ ಸಭಾ ನಡಾವಳಿಯ ಖಾಲಿ ಜಾಗದಲ್ಲಿ ಸೇರಿಸಿರುವುದು ಕಂಡು ಬಂದಿರುತ್ತದೆ. ಪಟ್ಟಿಯ ಕ್ರ.ಸಂ.44ರಲ್ಲಿ ಮೇಜು & ಕುರ್ಚಿಯ ಮೊತ್ತ ರೂ. 4,71,812/- ರ ನಮೂದು ಇರುತ್ತದೆ. ಒಟ್ಟಾರೆ ಮೇಜು & ಕುರ್ಚಿ ಖರೀದಿಯ ಬಗ್ಗೆ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಅನುಮತಿ ಪಡೆಯದಿದ್ದರೂ ಇದನ್ನು ಮರೆಮಾಚಲು ನಂತರ ಸಾಮಾನ್ಯ ಸಭೆಯ

ನಡಾವಳಿಗಳಲ್ಲಿ ಸೇರಿಸಿರುವುದು ಕಂಡು ಬಂದಿರುತ್ತದೆ.

15. ಟೆಂಡರ್ ಪ್ರಕ್ರಿಯೆಗಳು ಪಂಚಾಯಿತಿಯ ಕಿರಿಯ ಅಭಿಯಂತರರ ಮುಖಾಂತರ ನಡೆಯಬೇಕಾಗಿರುತ್ತದೆ. ವಿರಾಜಪೇಟೆ ಪಟ್ಟಣ ಪಂಚಾಯಿತಿಯಲ್ಲಿ ಶ್ರೀ ಎನ್.ಪಿ ಹೇಮಕುಮಾರ್ ಖಾಯಂ ಕಿರಿಯ ಅಭಿಯಂತರರು ಇದ್ದು, ಹಾಲಿ ಮೂರು ದಿವಸ ಸೋಮವಾರಪೇಟೆ ಪಟ್ಟಣ ಪಂಚಾಯಿತಿಗೆ ನಿಯೋಜಿಸಿದ್ದರೂ, 3 ದಿವಸ ವಿರಾಜಪೇಟೆ ಪಟ್ಟಣ ಪಂಚಾಯಿತಿಯಲ್ಲಿ ಲಭ್ಯವಿದ್ದರೂ, ಅವರ ಗಮನಕ್ಕೆ ತರದೇ ಕಂದಾಯ ಪರಿವೀಕ್ಷಕರಾದ ಶ್ರೀ ವಿ.ಕೆ.ಸೋಮಶೇಖರ್‌ರವರಿಗೆ ಈ ಟೆಂಡರ್‌ನ ಜವಾಬ್ದಾರಿ ವಹಿಸಿರುವುದು ನಿಯಮಬಾಹಿರವಾಗಿರುತ್ತದೆ. ಶ್ರೀ ಎನ್.ಪಿ.ಹೇಮ ಕುಮಾರ್, ಕಿರಿಯ ಅಭಿಯಂತರರು, ಪುರಸಭೆ, ವಿರಾಜಪೇಟೆರವರ ಹೇಳಿಕೆ ಪಡೆದಿದ್ದು, ಅವರು ಪುರಸಭೆಯಲ್ಲಿ ಲಭ್ಯವಿದ್ದರೂ ಅವರ ಗಮನಕ್ಕೆ ಬಾರದೇ ಟೆಂಡರ್ ಪ್ರಕ್ರಿಯೆ ನಡೆಸಿರುವುದು ಅವರ ಹೇಳಿಕೆಯಿಂದ ಕಂಡು ಬಂದಿರುತ್ತದೆ.

16. ವೆಚ್ಚವನ್ನು ದಿ. 27/07/2021 ರಂದು ಪಾವತಿಸಿದ್ದು, ಕೌನ್ಸಿಲ್ ಸಭೆಯ ಮಂಜೂರಾತಿ ಪಡೆದಿರುವುದಿಲ್ಲ. ಮತ್ತು ದಿ. 30/09/2021ರಂದು ಘಟನೋತ್ತರ ಮಂಜೂರಾತಿ ಪಡೆದಿದ್ದು, ಆದರೆ ಅದು ತೀರಾ ಸಂಶಯಾಸ್ಪದವಾಗಿರುತ್ತದೆ. ದಿ. 30/09/2021ರಲ್ಲಿ ಏಪ್ರಿಲ್, ಮೇ, ಜೂನ್, ಜುಲೈ, ಆಗಸ್ಟ್ 2021ರ ಮಾಹೆಯ ಜಮೆ ಮತ್ತು ಖರ್ಚನ್ನು ಸ್ಥಿರೀಕರಿಸುವ ಬಗ್ಗೆ ಎಂಬುದಾಗಿರುತ್ತದೆ. ಆದರೆ ದಿ. 7/10/2021ರ ಸ್ಥಾಯಿ ಸಮಿತಿ ಸಭೆಯಲ್ಲಿ ಈ ಪಿಠೋಪಕರಣ ಖರೀದಿಯ ಮೊತ್ತ ಪಾವತಿಸಿದಕ್ಕೆ ಘಟನೋತ್ತರ ಮಂಜೂರಾತಿ ನೀಡಿರುವುದು ಕಂಡು ಬಂದಿರುತ್ತದೆ.

17. ಕಡತದ ಪ್ರಕಾರ 1) ಗ್ಲಾಸ್ ಜೋನ್ ಪ್ರೋಜೆಕ್ಟ್ ಬೆಂಗಳೂರು, 2) ಮೆ॥ ಇಂಟೀರಿಯರ್ ಕಾನ್ಸಪ್ಟ್, ಬೆಂಗಳೂರು ಮತ್ತು 3) ಮೆ॥ ಚಂದ್ರ ಫರ್ನೀಚರ್, ಗೋಣಿಕೊಪ್ಪರವರುಗಳು ಟೆಂಡರ್‌ನಲ್ಲಿ ಭಾಗವಹಿಸಿದ ಬಗ್ಗೆ ದಾಖಲೆ ಇದ್ದು, ಆದರೆ, ಗ್ಲಾಸ್ ಜೋನ್ ಪ್ರೋಜೆಕ್ಟ್, ಬೆಂಗಳೂರು ರವರು ಒಬ್ಬರೇ ಉಳಿದ 2 ಟೆಂಡರ್ ಫಾರಂಗಳನ್ನು ಭರ್ತಿ ಮಾಡಿ ಸಲ್ಲಿಸಿದಂತೆ ಕಂಡು ಬಂದಿರುತ್ತದೆ. ದಿ. 1/06/2021 ರಂದು 6.40, 6.43 ಮತ್ತು 6.56 ಪಿ.ಎಂಗೆ ಒಂದೇ ದಿವಸ ನಿಮಿಷಗಳ ವ್ಯತ್ಯಾಸಗಳಲ್ಲಿ ಮೂರು ಟೆಂಡರ್‌ದಾರರು ಚಲನ್ ಭರ್ತಿ ಮಾಡಿದ್ದಲ್ಲದೇ, ದಿ. 2/6/2021ರಂದು ಒಂದೇ ದಿವಸ ಮೂರು ಟೆಂಡರ್‌ದಾರರು ಬ್ಯಾಂಕ್ ಹಣ ಪಾವತಿಸಿರುತ್ತಾರೆ.

18. ಮೆ॥ ಚಂದ್ರ ಫರ್ನೀಚರ್, ಹರಿಶ್ಚಂದ್ರಪುರ, ಈ ಟೆಂಡರ್‌ದಾರರ ಬಗ್ಗೆ ಗೋಣಿಕೊಪ್ಪದಲ್ಲಿ ವಿಚಾರಿಸಲಾಗಿ ಗೋಣಿಕೊಪ್ಪ ಹರಿಶ್ಚಂದ್ರಪುರದಲ್ಲಿ ಇಂತಹ ಮಳಿಗೆ ಯಾವುದು ಕಂಡು ಬಂದಿರುವುದಿಲ್ಲ. ಹಾಗೂ ಪೀಠೋಪಕರಣ ಸರಬರಾಜು ಮಾಡಿದ ಮೆ॥ ಗ್ಲಾಸ್ ಜೋನ್ ಪ್ರೋಜೆಕ್ಟ್, ಬೆಂಗಳೂರು ಮತ್ತು ಇನ್ನೊಂದು ಟೆಂಡರ್‌ದಾರರಾದ ಮೆ॥ ಇಂಟೀರಿಯರ್ ಕಾನ್ಸೆಪ್ಟ್, ಬೆಂಗಳೂರುರವರಿಗೆ ಪಟ್ಟಣ ಪಂಚಾಯಿತಿಯವರಿಂದ ಪಡೆದ ವಿಳಾಸಕ್ಕೆ ವಿಚಾರಣೆ ಸಂಬಂಧ ಹಾಜರಾಗುವ ಬಗ್ಗೆ ನೊಂದಾಯಿತ ಅಂಚೆ ಮೂಲಕ ನೋಟೀಸ್ ಕಳುಹಿಸಿದ್ದು, ಆದರೆ ವಿಳಾಸದಲ್ಲಿ ಇಲ್ಲ ಎಂಬ ಕಾರಣಕ್ಕೆ ನೋಟೀಸ್‌ಗಳು ವಾಪಸ್ಸು ಬಂದಿದ್ದು, ಇದನ್ನು ಗಮನಿಸಿದಾಗ ಎಲ್ಲಾ ಟೆಂಡರ್‌ದಾರರು ಬೇನಾಮಿ ಟೆಂಡರ್ ದಾರರಾಗಿರುವುದು ಕಂಡು ಬಂದಿರುತ್ತದೆ.

**19.** ಟೆಂಡರ್ ಪ್ರಕಟಣೆಯಲ್ಲಿ ಎಲ್ಲೂ ಇ.ಎಂ.ಡಿ ಮೊತ್ತ ನಮೂದಿಸಿರುವುದಿಲ್ಲ. ಹಾಗೂ ಟೆಂಡರ್‌ನಲ್ಲಿ ಭಾಗವಹಿಸಿದವರು ಕಟ್ಟಿರುವ ಇ.ಎಂ.ಡಿ ಮೊತ್ತದ ಬಗ್ಗೆ ಪಟ್ಟಣ ಪಂಚಾಯಿತಿಯಿಂದ ಪಡೆದ ಮಾಹಿತಿಯಲ್ಲಿ ಶಾರಿಕ್ ಎಂಬವರು ಮಾತ್ರ 10,000/- ಇ.ಎಂ.ಡಿ ಪಾವತಿಸಿರುತ್ತಾರೆ. ಡಿ.ಡಿ.ಯಲ್ಲಿ ಶಾರಿಕ್ ಎಂಬುದಾಗಿ ನಮೂದಿಸಿದ್ದು, ಮೆ. ಗ್ಲಾಸ್ ಜೋನ್ ಎಂಬ ಬಗ್ಗೆ ನಮೂದು ಇರುವುದಿಲ್ಲ ಮತ್ತು ಉಳಿದ 2 ಟೆಂಡರ್‌ದಾರರು ಯಾವುದೇ ಇ.ಎಂ.ಡಿ ಮೊತ್ತ ಪಾವತಿಸಿರುವುದಿಲ್ಲ. ಆ ಮೇರೆಗೆ ಬೇನಾಮಿ ಟೆಂಡರ್‌ದಾರರು ಎಂಬುದು ಸ್ಪಷ್ಟವಾಗಿರುತ್ತದೆ ಹಾಗೂ ಅಂತಿಮ ಟೆಂಡರ್‌ದಾರರಿಗೆ ಖರೀದಿಯ ಮೊತ್ತ ಪಾವತಿಸಿದ್ದರೂ ಇ.ಎಂ.ಡಿ ಮೊತ್ತವನ್ನು ಮರುಪಾವತಿಸಿರುವುದಿಲ್ಲ.

**20.** ಟೆಂಡರ್ ಫಾರಂನ್ನು ಪಟ್ಟಣ ಪಂಚಾಯಿತಿಯ ಕಛೇರಿಯಲ್ಲಿ ದಿ. 3/06/2021ರಂದು ತೆರೆದಿದ್ದು, ಆದರೆ ಟೆಂಡರ್ ಲಕೋಟೆ ತೆರೆದ ಬಗ್ಗೆ ಲಕೋಟೆ ಮೇಲೆ ಪಂಚಾಯಿತಿ ಮುಖ್ಯಾಧಿಕಾರಿ, ಅಧಕ್ಷರು ಮತ್ತು ಅಭಿಯಂತರರ ಸಹಿ ಇರುವುದಿಲ್ಲ, ಯಾವುದೇ ನಿಯಮಗಳನ್ನು ಪಾಲಿಸಿರುವುದು ಕಂಡು ಬಂದಿರುವುದಿಲ್ಲ.

**21.** ಟೆಂಡರ್ ಅಂತಿಮಗೊಂಡ ನಂತರ ಮೆ॥ ಗ್ಲಾಸ್ ಜೋನ್ ಪ್ರೋಜೆಕ್ಟ್ ರವರು ದಿ:16/06/2021ರಂದು ಪೀಠೋಪಕರಣಗಳನ್ನು ಸರಬರಾಜು ಮಾಡಿದ್ದು, ಈ ಬಗ್ಗೆ ಕ್ಯಾಡ್ ಸಂಸ್ಥೆಯಿಂದ ಗುಣ ಮಟ್ಟ ಪರಿಶೀಲನೆ ವರದಿ ನೀಡಿದ್ದು, ಆದರೆ ಗುಣಮಟ್ಟ ಪರೀಶೀಲನಾ ವರದಿಯಲ್ಲಿ ಪರಿಶೀಲನಾ ದಿ:24/05/2021 ಎಂಬುದಾಗಿ ನಮೂದಿಸಿರುವುದು ಕಂಡುಬಂದಿರುತ್ತದೆ.

22. ದೂರುದಾರರು ನೀಡಿರುವ ಪ್ರತ್ಯುತ್ತರದಲ್ಲಿ ವಿರಾಜಪೇಟೆಯ ಮೆ॥ ಕೂರ್ಗ್ ಹೈ ಲೈಟ್ ಫರ್ನೀಚರ್, ವಿರಾಜಪೇಟೆಯವರಿಂದ ಈಗಾಗಲೇ ವಿರಾಜಪೇಟೆ ಪಟ್ಟಣ ಪಂಚಾಯಿತಿಗೆ ಸರಬರಾಜಾದ ಪೀಠೋಪಕರಣಗಳಿಗೆ ದಿ:7/5/2022ರ ದರಪಟ್ಟಿ ಪಡೆದು ದರ ನಮೂದಿಸಿದ್ದು, ಸದರಿ ದರಪಟ್ಟಿಯನ್ನು ಗಮನಿಸಿದಾಗ, ಸದರಿ ದರಗಳಿಗಿಂತ ದುಪ್ಪಟ್ಟು ದರಕ್ಕೆ ಖರೀದಿಸಿರುವುದು ಕಂಡು ಬಂದಿರುತ್ತದೆ.

23. ಕೊಡಗು ಜಿಲ್ಲೆಯ ಸರ್ಕಾರಿ ಕಛೇರಿಗಳಿಗೆ ಅಧಿಕೃತ ಪೀಠೋಪಕರಣ ಸರಬರಾಜುದಾರರಾದ ಮಡಿಕೇರಿಯ ಮೆ॥ ಪ್ರಶಾಂತ್ ಸ್ಟೀಲ್ & ವುಡ್ ಫರ್ನೀಚರ್‌ರವರಿಂದ ಈಗಾಗಲೇ ವಿರಾಜಪೇಟೆ ಪಟ್ಟಣ ಪಂಚಾಯಿತಿಗೆ ಸರಬರಾಜದ ಪೀಠೋಪಕರಣಗಳಿಗೆ 2021ನೇ ಸಾಲಿನ ಜೂನ್ ತಿಂಗಳ ದರ ಪಟ್ಟಿ ಪಡೆದಿದ್ದು, ಪೀಠೋಪಕರಣಗಳ ಬೆಲೆಯಲ್ಲಿ ಬಾರಿ ವ್ಯತ್ಯಾಸವಿರುವುದು ಕಂಡು ಬಂದಿರುತ್ತದೆ.

| ಪೀಠೋಪಕರಣ ವಿವರ | ಪಟ್ಟಣ ಪಂಚಾಯಿತಿ ಖರೀದಿಸಿದ ದರ | ಅರ್ಜಿದಾರರ ನೀಡಿದ ಮೆ॥ ಕೂರ್ಗ್ ಹೈ ಲೈಟ್ ಫರ್ನೀಚರ್ ವಿರಾಜಪೇಟೆಯವರ ದರ | ವಿಚಾರಣೆ ವೇಳೆ ಮೆ. ಪ್ರಶಾಂತ್ ಸ್ಟೀಲ್ & ವುಡ್ ಫರ್ನೀಚರ್‌ರವರಿಂದ ಪಡೆದ ದರ ವಿವರ |
|---|---|---|---|
| 1 Seater chair 18 gauge black colour Width 1.6 and Height 2.6 Bend Handle. | 4,350=00 | 2,100=00 | 2,596=00 |
| Wood base table L 1.21/2 W 4.81/2 and 112.7 and 2 Drawers | 21,500=00 | 8,000=00 | 8,201=00 |
| 1 Seater Official Chair with Handle rotator | 10,500=00 | 3,800=00 | 7,071=00 |
| 3 Seater-chair steel with bend Handle L 2.7 and W 5.5 | 12,500=00 | 9,500=00 | 7,021=00 |

**24.** ದಿ. 11/04/2022 ರಂದು ಮಾನ್ಯ ಲೋಕಾಯುಕ್ತರಿಗೆ ನೀಡಿದ ವರದಿಯಲ್ಲಿ ಸಾಮಾನ್ಯ ಸಭೆಯ ನಡಾವಳಿ ಸಂಖ್ಯೆ 15 ದಿನಾಂಕ 12/4/2022ರ ಮೇರೆ ನಿರ್ಣಯ ಕೈಗೊಂಡಿರುವ ಬಗ್ಗೆ ಮಾಹಿತಿ ನೀಡಿದ್ದು, ಆದರೆ, ದಿ: 12/4/2021ರ ಸಾಮಾನ್ಯ ಸಭೆ ರದ್ದಾಗಿದ್ದು, ದಿ: 15/4/2021ರಂದು ನಡೆದಿರುತ್ತದೆ.

**25.** ದಿ. 11/04/2022ರಂದು ಮಾನ್ಯ ಲೋಕಾಯುಕ್ತರಿಗೆ ನೀಡಿದ ವರದಿಯ ಅಡಕದಲ್ಲಿ ಸಾಮಾನ್ಯ ಸಭೆಯ ನಡಾವಳಿ ಎಂಬುದಾಗಿ ಟೈಪ್ ಮಾಡಿದ ಪ್ರತಿ ನೀಡಿದ್ದು, ಸದರಿ ಪತ್ರದಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ-18 ಗೈರು ಹಾಜರಿದ್ದ ಸದಸ್ಯರು-0 ನಾಮನಿರ್ದೇಶನ ಸದಸ್ಯರು-03 ಗೈರು ಹಾಜರಿದ್ದ ನಾಮ ನಿರ್ದೇಶನ ಸದಸ್ಯರು-0 ಎಂಬುದಾಗಿಯೂ ವಿಷಯ ಸಂಖ್ಯೆ 15ರಲ್ಲಿ ವಿರಾಜಪೇಟೆ ಪಟ್ಟಣ ಪಂಚಾಯಿತಿಯ ಕಛೇರಿ ಹಾಗೂ ಟೌನ್‌ಹಾಲ್‌ಗೆ ಟೇಬಲ್ ಕುರ್ಚಿಗಳನ್ನು ದುರಸ್ಥಿ ಹಾಗೂ ಸರಬರಾಜು ಮಾಡುವ ಬಗ್ಗೆ ಚರ್ಚಿಸತಕ್ಕ ವಿಚಾರ, ತೀರ್ಮಾನ ವಿರಾಜಪೇಟೆ ಪಟ್ಟಣ ಪಂಚಾಯಿತಿಯ ಕಛೇರಿ ಮತ್ತು ಟೌನ್ ಹಾಲ್‌ಗೆ ಟೇಬಲ್ ಕುರ್ಚಿಯನ್ನು ದುರಸ್ಥಿ ಹಾಗೂ ಸರಬರಾಜು ಮಾಡುವ ಬಗ್ಗೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು ಎಂಬ ಬಗ್ಗೆ ವರದಿ ನೀಡಿರುತ್ತಾರೆ. ಆದರೆ, ಪಟ್ಟಣ ಪಂಚಾಯಿತಿಯ ದಿ: **15/4/2021ರ ಸಭಾ ನಡಾವಳಿ ಪುಸ್ತಕವನ್ನು ಪರಿಶೀಲಿಸಲಾಗಿ** ಆ ದಿವಸ ಒಟ್ಟು 15 ವಿಷಯಗಳ ಬಗ್ಗೆ ನಮೂದು ಇದ್ದು, ಪೀಠೋಪಕರಣ ಖರೀದಿ ವಿಚಾರವನ್ನು ವಿಷಯ ಸಂಖ್ಯೆ-15ರಲ್ಲಿ ಕಡೆಯದಾಗಿ ನಮೂದಿಸಿರುವುದು ಕಂಡು ಬಂದಿರುತ್ತದೆ. ನಡಾವಳಿ ಪುಸ್ತಕದಲ್ಲಿ ಅಧ್ಯಕ್ಷರು ಮಾತ್ರ ಸಹಿ ಮಾಡುವ ಕ್ರಮ ಕಂಡು

ಬಂದಿದ್ದು, ಉಳಿದಂತೆ ಸದಸ್ಯರುಗಳು ಪ್ರತ್ಯೇಕ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡುವ ವ್ಯವಸ್ಥೆ ಇರುತ್ತದೆ.

26. ದಿ. 11/04/2022ರಂದು ಮಾನ್ಯ ಲೋಕಾಯುಕ್ತರಿಗೆ ನೀಡಿದ ವರದಿಯ ಅಡಕದಲ್ಲಿ ದಿ. 30/09/2021ರ ವಿಶೇಷ ಸಾಮಾನ್ಯ ಸಭೆಯ ನಡಾವಳಿ ಎಂಬುದಾಗಿ ಟೈಪ್ ಮಾಡಿದ ಪ್ರತಿ ನೀಡಿದ್ದು, ಅದರಲ್ಲಿ ವಿಷಯ ಸಂಖ್ಯೆ-2 ಏಪ್ರಿಲ್, ಮೇ, ಜೂನ್, ಜುಲೈ, ಆಗಸ್ಟ್ 2021ರ ಮಾಹೆಯ ಜಮೆ ಮತ್ತು ಖರ್ಚನ್ನು ಸ್ಥಿರೀಕರಿಸುವ ಬಗ್ಗೆ ಚರ್ಚಿಸುವ ತಕ್ಕ ವಿಚಾರ ತೀರ್ಮಾನ ಮೆ॥ ಗ್ಲಾಸ್ ಜೋನ್ ಪ್ರೋಜೆಕ್ಟ್, ಬೆಂಗಳೂರು ಇವರು ಮೇಜು ಮತ್ತು ಕುರ್ಚಿಯನ್ನು ಖರೀದಿಸಿರುವ ಬಿಲ್ಲನ್ನು ಜಮೆ ಖರ್ಚಿನಲ್ಲಿ ಅಂಗೀಕರಿಸಿ ಅನುಮೋದನೆಯನ್ನು ನೀಡಿ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು ಎಂಬುದಾಗಿ ನಮೂದಿಸಿರುತ್ತಾರೆ. ಆದರೆ, ವಿಚಾರಣೆ ವೇಳೆ ಪಟ್ಟಣ ಪಂಚಾಯಿತಿಯ ದಿ: 30/9/2021ರ ಸಭಾ ನಡಾವಳಿ ಪುಸ್ತಕವನ್ನು ಪರಿಶೀಲಿಸಲಾಗಿ ವಿಷಯ ಸಂಖ್ಯೆ 2 ರಲ್ಲಿ ಏಪ್ರಿಲ್, ಮೇ, ಜೂನ್, ಜುಲೈ, ಆಗಸ್ಟ್ 2021ರ ಮಾಹೆಯ ಜಮೆ ಮತ್ತು ಖರ್ಚನ್ನು ಸ್ಥಿರೀಕರಿಸುವ ಬಗ್ಗೆ ಚರ್ಚಿಸತಕ್ಕ ವಿಚಾರ ಎಂಬುದಾಗಿದ್ದು, ತೀರ್ಮಾನದಲ್ಲಿ ಬೇರೆ ಬೇರೆ ವಿಚಾರಗಳ ಬಗ್ಗೆ ಪ್ರಸ್ತಾಪಿಸದ್ದು, ಕೊನೆಯಲ್ಲಿ ನಂತರ ಜಮೆ ಖರ್ಚನ್ನು ಸ್ಥಿರೀಕರಿಸಿ ಅಂಗೀಕರಿಸಲಾಯಿತು ಎಂಬುದಾಗಿರುತ್ತದೆ. ನಂತರ ಮೆ, ಗ್ಲಾಸ್ ಜೋನ್ ಪ್ರೋಜೆಕ್ಟ್, ಬೆಂಗಳೂರು ಇವರು ಮೇಜು ಮತ್ತು ಕುರ್ಚಿಯನ್ನು ಖರೀದಿಸಿದ ಬಿಲ್ಲನ್ನು ಜಮೆ ಮತ್ತು ಖರ್ಚಿನಲ್ಲಿ ಅಂಗೀಕರಿಸಿ ಅನುಮೋದನೆ ನೀಡಿ ಸಭೆಯಲ್ಲಿ ತೀರ್ಮಾನಿಸಲಾಯಿತು ಎಂಬುದಾಗಿ ನಂತರ ಸೇರಿಸಿರುವುದು ಕಂಡು ಬಂದಿರುತ್ತದೆ.

27. ಸಭಾ ನಡಾವಳಿಯ ವಿಷಯ ಸಂಖ್ಯೆ 15 ರಲ್ಲಿ 2021-12ನೇ ಸಾಲಿನ ಶೇ5%ರ ಯೋಜನೆಯಡಿ ಅಂಗವಿಕಲತೆಯ ಪೋಷಣಾ ವೆಚ್ಚಕ್ಕೆ ಬಂದಿರುವ ಅರ್ಜಿಗಳ ವಿಚಾರ ಇದ್ದು, ಇಲ್ಲೂ ಮೇಜು ಮತ್ತು ಕುರ್ಚಿ ಖರೀದಿ ವಿಚಾರವನ್ನು ಸೇರಿಸಿ ಬರೆದಿದ್ದು, ಅಲ್ಲದೇ ತೀರ್ಮಾನದಲ್ಲಿ ಕೊನೆಯಲ್ಲಿ ವಿರಾಜಪೇಟೆ ಪಟ್ಟಣ ಪಂಚಾಯಿತಿಯ ಕಛೇರಿ ಹಾಗೂ ಟೌನ್ ಹಾಲ್‌ಗೆ ಟೇಬಲ್ ಹಾಗೂ ಕುರ್ಚಿಯನ್ನು ದುರಸ್ಥಿ ಹಾಗೂ ಸರಬರಾಜು ಮಾಡುವ ಬಗ್ಗೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಹಾಗೂ ಬಿಲ್ಲನ್ನು ಪಾವತಿಸುವ ಬಗ್ಗೆ ಒಪ್ಪಲಾಯಿತು ಎಂಬುದಾಗಿ ಸೇರಿಸಿರುವುದು ಕಂಡುಬಂದಿರುತ್ತದೆ.

28. 4 ತಿಂಗಳ ಖರ್ಚು ವೆಚ್ಚದ ಪಟ್ಟಿ ಇದ್ದು, ಸದರಿ ಪಟ್ಟಿಯಲ್ಲಿ ನೂರಾರು ಖರ್ಚುವೆಚ್ಚದ ವಿವರಗಳಿದ್ದರೂ, ಅವುಗಳನ್ನು ಯಾವುದನ್ನು ಪ್ರಸ್ತಾಪಿಸಿ ನಮೂದಿಸದೇ, ಈ ವಿಷಯವನ್ನು ಮಾತ್ರ ಎರಡೆರಡು ಬಾರಿ ಸಭಾ ನಡಾವಳಿಯ ಖಾಲಿ ಜಾಗದಲ್ಲಿ ಸೇರಿಸಿರುವುದು ಕಂಡು ಬಂದಿರುತ್ತದೆ. ಪಟ್ಟಿಯ ಕ್ರ.ಸಂ.44ರಲ್ಲಿ ಮೇಜು & ಕುರ್ಚಿಯ ಮೊತ್ತ ರೂ.4,71,812/-ರ ನಮೂದು ಇರುತ್ತದೆ. ಒಟ್ಟಾರೆ ಮೇಜು & ಕುರ್ಚಿ ಖರೀದಿಯ ಬಗ್ಗೆ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಅನುಮತಿ ಪಡೆಯದಿದ್ದರೂ ಇದನ್ನು ಮರೆಮಾಚಲು ನಂತರ ಸಾಮಾನ್ಯ ಸಭೆಯ ನಡಾವಳಿಗಳಲ್ಲಿ ಸೇರಿಸಿರುವುದು ಕಂಡು ಬಂದಿರುತ್ತದೆ.

29. ಪಟ್ಟಣ ಪಂಚಾಯಿತಿಯ ವಿಪಕ್ಷ ಸದಸ್ಯರು ಪಂಚಾಯಿತಿಯ ಸಾಮಾನ್ಯ ಸಭೆಗಳಲ್ಲಿ ದುಪ್ಪಟ್ಟು ಬೆಲೆಗೆ ಪೀಠೋಪಕರಣ ಖರೀದಿಸಿದ

ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರೂ ಸರಬರಾಜುದಾರರಿಗೆ ಹಣ ಪಾವತಿಸಲಾಗಿರುತ್ತದೆ. ಅರ್ಜಿದಾರರಿಗೆ ಮಾಹಿತಿ ಹಕ್ಕಿನಡಿ ಮಾಹಿತಿ ಕೋರಿದರೆ ಪೀಠೋಪಕರಣ ಖರೀದಿ ವೆಚ್ಚ ರೂ 4,71,812/- ಎಂಬುದಾಗಿ ಮಾಹಿತಿ ನೀಡಿ ಖರೀದಿಯ ಮಳಿಗೆ ವಿವರ ಲಭ್ಯವಿಲ್ಲ ಎಂಬುದಾಗಿ ತಪ್ಪು ಮಾಹಿತಿ ನೀಡಿರುವುದು ಕಂಡುಬಂದಿರುತ್ತದೆ. ಸದರಿ ಮೊತ್ತ ಯಾರಿಗೆ ಪಾವತಿಸಿದ್ದಾರೆ ಎಂಬ ಮಾಹಿತಿ ಇಲ್ಲ ಎಂದು ನೀಡಿರುವುದು ತಮ್ಮ ತಪ್ಪನ್ನು ಮುಚ್ಚಿಡುವ ಪ್ರಯತ್ನವಾಗಿರುತ್ತದೆ.

30. ಕಿರಿಯ ಅಭಿಯಂತರರು ಪಂಚಾಯಿತಿಯಲ್ಲಿ ಲಭ್ಯವಿದ್ದರೂ, ಕಂದಾಯ ಪರಿವೀಕ್ಷರಿಗೆ ಟೆಂಡರ್ ಜವಾಬ್ದಾರಿ ವಹಿಸಿದ ಬಗ್ಗೆ ಸ್ಪಷ್ಟೀಕರಣ ಬಯಸಿದ ಮೇರೆ ಪಟ್ಟಣ ಪಂಚಾಯಿತಿಯಲ್ಲಿ ಕಿರಿಯ ಅಭಿಯಂತರರು ಮೂರು ದಿನ ಮಾತ್ರ ಲಭ್ಯವಿದ್ದು ಕರೋನ ಸಂದರ್ಭದಲ್ಲಿ ಪುರಭವನದಲ್ಲಿ ಕರೋನ ಚುಚ್ಚುಮದ್ದು ಮತ್ತು ತಪಾಸಣೆಗೆ ಹೆಚ್ಚಿನ ಜನರು ಬರುತ್ತಿದ್ದರಿಂದ ಪೀಠೋಪಕರಣಗಳ ಕೊರತೆ ಇದ್ದುದ್ದರಿಂದ ಕಂದಾಯ ಪರಿವೀಕ್ಷಕರಿಗೆ ದಿ.23/05/2021ರಂದು ಆದೇಶ ನೀಡಿ ನೇಮಿಸಲಾಗಿರುವುದಾಗಿ ವರದಿ ನೀಡಿದ್ದು, ಆದರೆ ದಿ. 15/4/2021ರಂದೇ ಸಾಮಾನ್ಯ ಸಭೆಯಲ್ಲಿ ಪೀಠೋಪಕರಣ ಖರೀದಿಗೆ ತೀರ್ಮಾನವಾಗಿದ್ದರೂ, ತುರ್ತಾಗಿ ಪೀಠೋಪಕರಣಗಳ ಅವಶ್ಯಕತೆ ಇದ್ದಲ್ಲಿ 40 ದಿವಸಗಳ ನಂತರ ಕಂದಾಯ ಪರಿವೀಕ್ಷಕರಿಗೆ ಜವಾಬ್ದಾರಿ ನೀಡಿ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವುದು ಗಮನಿಸಿದರೆ ದಿ. 15/04/2021ರ ಸಾಮಾನ್ಯ ಸಭೆಯಲ್ಲಿ ಉಲ್ಲೇಖಿಸಿರುವುದು ಅನುಮಾನಸ್ಪದವಾಗಿರುತ್ತದೆ. ಹಾಗೂ ನಂತರದ ಘಟನ್ನೋತರ ಮಂಜೂರಾತಿಗೆ ಸಂಬಂಧಿಸಿದ ದಿ. 30/09/2021ರ ವಿಶೇಷ ಸಾಮಾನ್ಯ ಸಭೆಯ ನಡಾವಳಿಯಲ್ಲಿ ಪೀಠೋಪಕರಣ ಖರೀದಿಯ

ವಿವರವನ್ನು ನಮೂದಿಸಿರುವುದು ಸಹ ಅರ್ಜಿದಾರರು ಮಾಹಿತಿ ಹಕ್ಕಿನಡಿ ಮಾಹಿತಿಗಳನ್ನು ಕೇಳಿದ ನಂತರ ಒಂದೇ ವಿಚಾರವನ್ನು ಎರಡೆರಡು ಬಾರಿ ಬೇರೆ ವಿಷಯದ ಪಕ್ಕದಲ್ಲಿ ಸೇರಿಸಿ ಬರೆದಿರುವುದು ಕಂಡು ಬಂದಿರುತ್ತದೆ.

31. ಪೀಠೋಪಕರಣ ಖರೀದಿ ಪ್ರಕ್ರಿಯೆಯಲ್ಲಿ ಟೆಂಡರ್ ನಿಯಮಗಳನ್ನು ಪಾಲಿಸದೇ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಯವರು ತಮಗೆ ಬೇಕಾದವವರಿಗೆ ಟೆಂಡರ್ ನೀಡುವ ಉದ್ದೇಶದಿಂದ ಸರಿಯಾದ ರೀತಿಯಲ್ಲಿ ಟೆಂಡರ್ ಪ್ರಕಟಣೆ ಹೊರಡಿಸದೇ, ಒಬ್ಬರಿಂದಲೇ ತಮಗೆ ಬೇಕಾದವರಿಂದ ಬೇನಾಮಿಯಾಗಿ ಹೆಚ್ಚಿನ ಬೆಲೆಯ ಮೂರು ಟೆಂಡರ್ ಕೊಟೇಷನ್‌ಗಳನ್ನು ಪಡೆದು, ಸದರಿ ಪೀಠೋಪಕರಣಗಳಿಗೆ ಹಾಲಿ ಇರುವ ಮಾರುಕಟ್ಟೆ ಬೆಲೆಗಿಂತ ದುಪ್ಪಟ್ಟು ಬೆಲೆಗೆ ಪೀಠೋಪಕರಣಗಳನ್ನು ಖರೀದಿಸಿ, ಸರ್ಕಾರಕ್ಕೆ ಸುಮಾರು ರೂ 2,73,692=00ಗಳಷ್ಟು ನಷ್ಟ ಉಂಟು ಮಾಡಿರುತ್ತಾರೆ. ಸದರಿ ಹಣ ದುರುಪಯೋಗ ಮತ್ತು ದುರಾಡಳಿತಕ್ಕೆ ಹಿಂದಿನ ಮುಖ್ಯಾಧಿಕಾರಿ ಶ್ರೀ ಎ.ಎಂ.ಶ್ರೀಧರ್ (ಹಾಲಿ ಕರ್ತವ್ಯ ಮುಖ್ಯಾಧಿಕಾರಿ ಶ್ರೀರಾಂಪುರ ಮೈಸೂರು), ಪಟ್ಟಣ ಪಂಚಾಯಿತಿ ಅಧ್ಯಕ್ಷರು ಶ್ರೀಮತಿ ಟಿ.ಆರ್.ಸುಶ್ಮಿತಾ, ಕಂದಾಯ ನಿರೀಕ್ಷಕ, ಶ್ರೀ.ವಿ.ಕೆ.ಸೋಮಶೇಖರ್ ಮತ್ತು ಹಣ ಪಾವತಿಸಿದ ಹಾಲಿ ಮುಖ್ಯಾಧಿಕಾರಿ ಶ್ರೀ.ಎ.ಚಂದ್ರಕುಮಾರ್ ರವರುಗಳು ಜವಾಬ್ಧಾರರಾಗಿರುತ್ತಾರೆ ಎಂದು ಅಭಿಪ್ರಾಯಪಟ್ಟು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ.

32. **1 ರಿಂದ 3ನೇ ಎದುರುದಾರರಿಂದ ದಿ:09/12/2022 ರಂದು ತನಿಖಾ ವರದಿಗೆ ಆಕ್ಷೇಪಣೆ ಸ್ವೀಕರಿಸಿದ್ದು,** ಪರಿಶೀಲಿಸಲಾಗಿ, ತನಿಖಾಧಿಕಾರಿಗಳು

ಮೆ॥ ಗ್ಲಾಸ್ ಜೋನ್, ಬೆಂಗಳೂರು ರವರಿಗೆ ಪಾವತಿಸಿದ ಬಿಲ್ಲಿನ ಮೊತ್ತವನ್ನು ಅನುಮೋದನೆ ನೀಡಿರುವುದಾಗಿ ನಂತರ ಸೇರಿಸಿರುವುದಾಗಿ ಆಪಾದಿಸಿರುವುದು ಸರಿಯಲ್ಲ. ಸಭೆ ನಡೆದ ದಿನಾಂಕದಂತೆ ದಾಖಲಿಸಿ ಅಧ್ಯಕ್ಷರಿಂದ ಸಹಿಯನ್ನು ಪಡೆಯಲಾಗಿರುತ್ತದೆ. ವಿಷಯ ಸಂ:15ಕ್ಕೆ ಸಂಬಂಧಿಸಿದಂತೆ ಟೌನ್ ಹಾಲ್‌ಗೆ ಮೇಜು ಕುರ್ಚಿಯನ್ನು ಖರೀದಿಸಿ ಸರಬರಾಜು ಮಾಡುವ ಬಗ್ಗೆ ಬಿಲ್ಲನ್ನು ಪಾವತಿಸುವ ಕುರಿತು ನಂತರ ಸೇರ್ಪಡೆಗೊಳಿಸಿರುವುದಿಲ್ಲ. ಸಭೆ ನಡೆದ ದಿನವೇ ಸಭಾ ಅಧ್ಯಕ್ಷರು ಸಹಿ ಮಾಡಿರುತ್ತಾರೆ.

33. ಮೇಜು ಮತ್ತು ಕುರ್ಚಿ ಖರೀದಿಸುವ ಬಗ್ಗೆ ಸಾಮಾನ್ಯ ಸಭೆಯಲ್ಲಿ ಅನುಮತಿ ಪಡೆದಿದ್ದರೂ ಇದನ್ನು ಮರೆಮಾಚಲು ನಂತರ ಸಾಮಾನ್ಯ ಸಭೆಯ ನಡವಳಿಯಲ್ಲಿ ಸೇರಿಸಲಾಗಿದೆ ಎನ್ನುವುದು ಸರಿಯಲ್ಲ. ಏಕೆಂದರೆ ದಿ: 15/04/2021 ರಂದು ವಿಷಯ ಸಂ:15ರಲ್ಲಿ ಈ ಕುರಿತು ತೀರ್ಮಾನವಾಗಿರುತ್ತದೆ.

34. ದಿ:15/04/2021 ರಂದು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುವುದಿಲ್ಲವೆಂದು ಆಪಾದಿಸಿದ್ದು, ಸದರಿ ಸಭೆಗೆ ಎಲ್ಲಾ ಸದಸ್ಯರು ಹಾಜರಾಗಿದ್ದು, ಸಹಿ ಮಾಡುವ ಪುಸ್ತಕದಲ್ಲಿ ಕೆಲವೊಂದು ಸದಸ್ಯರು ಸಹಿ ಮಾಡಿರುವುದಿಲ್ಲ. ಆದರೆ, ಏಪ್ರಿಲ್ 2021ರ ಸಭೆಗೆ ಹಾಜರಾದ ಸದಸ್ಯರುಗಳಿಗೆ ಸಭಾ ಭತ್ಯೆಯನ್ನು ಪಾವತಿಸಲಾಗಿರುತ್ತದೆ. ಅಧ್ಯಕ್ಷರು ದಿ:02/09/2022 ರಂದು ಟಿಪ್ಪಣಿ ನೀಡಿ ಸಭಾ ನಡವಳಿಯನ್ನು ತಾನು ಓದಿದ ನಂತರವೇ ಸಹಿ ಮಾಡಿರುವುದಾಗಿ ಲಿಖಿತವಾಗಿ ತಿಳಿಸಿರುವುದು ಸ್ವಯಂ ವೇದ್ಯವಾಗಿರುತ್ತದೆ. ಆದ್ದರಿಂದ, ಮರೆಮಾಚುವ ಪ್ರಸಂಗ ಉದ್ಭವಿಸುವುದಿಲ್ಲ.

**35.** ಕರ್ನಾಟಕ ಪೌರ ಸೇವಾ ಅಧಿನಿಯಮ 1964ರ ಕಲಂ 43(ಘ)ರನ್ವಯ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯವನ್ನು ಅನುಷ್ಠಾನಗೊಳಿಸುವುದು ಅಧ್ಯಕ್ಷರಿಗೆ ಸಂವಿಧಾನಬದ್ಧವಾದ ಅಧಿಕಾರವಾಗಿರುತ್ತದೆ. ಆದ್ದರಿಂದ, ನಿಯಮದಲ್ಲಿ ಕಲ್ಪಿಸಿರುವ ಪ್ರಥಮ ಪ್ರಜೆಯ ಕಾರ್ಯವೈಖರಿಯನ್ನು ತನಿಖಾಧಿಕಾರಿಗಳು ಪ್ರಶ್ನಿಸಿರುವುದು ಆಕ್ಷೇಪಾರ್ಹವಾಗಿರುತ್ತದೆ. ಸ್ಥಳೀಯ ಸಂಸ್ಥೆಗಳಲ್ಲಿ ಜನ ಪ್ರತಿನಿಧಿಗಳಿಗೆ ಕಲ್ಪಿಸಿರುವ ಅವಕಾಶಗಳನ್ನು ಮೊಟಕುಗೊಳಿಸಲು ತನಿಖಾಧಿಕಾರಿಗಳಿಗೆ ಅವಕಾಶವಿರುವುದಿಲ್ಲ. ಸಾಮಗ್ರಿಗಳ ಖರೀದಿ/ಅನುಷ್ಠಾನದಲ್ಲಿ ಏನಾದರೂ ಲೋಪಗಳಿದ್ದಲ್ಲಿ ಮುಂದಿನ ಮಾಸಿಕ ಕೌನ್ಸಿಲ್ ಸಭೆಯಲ್ಲಿ ಚರ್ಚೆಗೆ ಬಂದು ಅನುಮೋದನೆ ಆಗದೆ ಇರುತ್ತಿತ್ತು. ಆದರೆ, ಸದರಿ ವಿಷಯಕ್ಕೆ ಆಕ್ಷೇಪಣೆ ಇಲ್ಲದೆ ಅವಿರೋಧವಾಗಿ ಅನುಮೋದನೆಗೊಂಡಿರುತ್ತದೆ.

**36.** ಪೀಠೋಪಕರಣ ಖರೀದಿಗೆ ಮುನ್ನ ದಿ:12/05/2021 ರಂದು ಸ್ಥಳೀಯ ದಿನ ಪತ್ರಿಕೆಯಲ್ಲಿ ವಿಚಾರಣಾ ದರಕ್ಕಾಗಿ ಮೇಜು ಮತ್ತು ಕುರ್ಚಿ ಖರೀದಿ ಸಂಬಂಧ ಸಾರ್ವಜನಿಕ ಪ್ರಕಟಣೆ ಹೊರಡಿಸಿ, ಕಚೇರಿಯ ನಾಮಫಲಕದಲ್ಲೂ ಪ್ರಚುರಪಡಿಸಿ, ಕೊಡಗು ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಹೆಚ್ಚು ಪ್ರಸಾರವಿರುವ ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆಯ ನಿಯಮಗಳ ಅಡಿ ನೊಂದಾವಣೆಗೊಂಡ ರಾಷ್ಟ್ರ ಬಂಧು ಮತ್ತು ಮೈಸೂರು ದಿಗಂತ ದಿನ ಪತ್ರಿಕೆಗಳಲ್ಲಿ ದರಗಳನ್ನು ಆಹ್ವಾನಿಸಿದ್ದು, ದರ ವಿಶ್ಲೇಷಣೆಯನ್ನು ಸಕ್ಷಮ ಪ್ರಾಧಿಕಾರವಾದ ಮೈಸೂರು ಮಹಾನಗರ ಪಾಲಿಕೆಯ ಅಧೀಕ್ಷಕ ಅಭಿಯಂತರರಿಂದ ಅನುಮೋದನೆ ಪಡೆಯಲಾಗಿರುತ್ತದೆ.

37. ತನಿಖಾಧಿಕಾರಿಗಳು ಆರೋಪಿಸಿದಂತೆ ಶಕ್ತಿ ದಿನ ಪತ್ರಿಕೆ ಮತ್ತು ರಾಜ್ಯ ದಿನ ಪತ್ರಿಕೆಗಳಲ್ಲಿ ಪ್ರಕಟಿಸದೆ ಇರಲು ವಿವರಣೆಯನ್ನು ನೀಡಲಾಗಿರುತ್ತದೆ. ಜಾಹಿರಾತು ಪ್ರಕಟಿಸುವ ಪತ್ರಿಕೆಗಳು ಅರ್ಹ ಪತ್ರಿಕೆಗಳಾಗಿರುತ್ತವೆ. ಈ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಗೊಂಡ ಕುರಿತು ಪ್ರಕಟಣೆಯ ಪತ್ರಿಕೆಯ ಭಾಗಗಳನ್ನು ಲಗತ್ತಿಸಲಾಗಿದೆ.

38. ಕಿರಿಯ ಅಭಿಯಂತರರಾದ ಹೇಮಂತ್ ಕುಮಾರ್ ರವರು ಪಟ್ಟಣ ಪಂಚಾಯತಿಯಲ್ಲಿ ಕೇವಲ 2 ದಿನ ಲಭ್ಯವಿದ್ದು, ಸಿವಿಲ್ ಕಾಮಗಾರಿ ನಿರ್ವಹಿಸಲು ಅವರಿಂದ ಸಾಧ್ಯವಾಗದೆ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಕಷ್ಟವಾಗುವ ಕಾರಣ ಕಂದಾಯ ನಿರೀಕ್ಷಕರಾದ ವಿ.ಕೆ.ಸೋಮಶೇಖರ ರವರಿಗೆ ಜವಾಬ್ದಾರಿಯನ್ನು ನೀಡಲಾಗಿರುತ್ತದೆ. ಕಿರಿಯ ಅಭಿಯಂತರರ ಹೇಳಿಕೆಯಂತೆ ಕುರ್ಚಿ ಮತ್ತು ಮೇಜು ಖರೀದಿಸಲು ತಾಂತ್ರಿಕ ಸಿಬ್ಬಂದಿ ಬೇಕು ಎಂಬುದು ನಿಯಮಾವಳಿಯಲ್ಲಿ ಇರುವುದಿಲ್ಲ. ಲೋಕೋಪಯೋಗಿ ಇಲಾಖೆಯ ಸ್ಟೋರ್ ಮ್ಯಾನ್ಯೂಲ್ ಪ್ರಕಾರ ಸಾಮಗ್ರಿಗಳ ಖರೀದಿ ಮತ್ತು ನಿರ್ವಹಣೆಯನ್ನು ತಾಂತ್ರಿಕೇತರ ಸಿಬ್ಬಂದಿಗಳು ನಿರ್ವಹಿಸಲು ಸರ್ಕಾರದ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಅದರನ್ವಯ ಕ್ಯಾಡ್ ಸಂಸ್ಥೆಯವರಿಂದ 3ನೇ ವ್ಯಕ್ತಿಯ ತಾಂತ್ರಿಕ ವರದಿಯನ್ನು ಪಡೆದ ನಂತರ ಬಿಲ್ಲನ್ನು ನಿಯಮಾನುಸಾರ ಪಾವತಿಸಲಾಗಿರುತ್ತದೆ.

39. ಕಿರಿಯ ಅಭಿಯಂತರರು ಹೇಳಿರುವಂತೆ ಅವರ ಗಮನಕ್ಕೆ ಬಾರದಂತೆ ಟೆಂಡರ್ ಪ್ರಕ್ರಿಯೆ ನಡೆಸಿರುವುದು ಸತ್ಯಕ್ಕೆ ದೂರವಾದ ಹೇಳಿಕೆಯಾಗಿರುತ್ತದೆ. ಏಕೆಂದರೆ ಅಳತೆಗೆ ಹೊರತಾದ

L

ಕಾಮಗಾರಿಯಾಗಿರುತ್ತದೆ. ಕಿರಿಯ ಅಭಿಯಂತರರು ಎರಡು ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಕಾಲ ಮಿತಿಯೊಳಗೆ ಕೌನ್ಸಿಲ್ ನಿರ್ಣಯವನ್ನು ಅನುಷ್ಠಾನಗೊಳಿಸಲು ಮೂಲ ಸೌಕರ್ಯಗಳನ್ನು ತುರ್ತಾಗಿ ಕಲ್ಪಿಸಬೇಕಾದ ಕಾರಣ ಮೇಲಾಧಿಕಾರಿಗಳು ತಮ್ಮ ವಿವೇಚನಾನುಸಾರ ಸೂಚಿಸಿದ ಕೆಲಸವನ್ನು ಆಯಾ ಸಂದರ್ಭಕ್ಕೆ ಅಧೀನ ಅಧಿಕಾರಿಗಳು ನಿರ್ವಹಿಸುವುದು ಸರ್ಕಾರಿ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.

40. 5 ಲಕ್ಷಕ್ಕಿಂತ ಹೆಚ್ಚಿನ ಕೆಲಸಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾಡಬಹುದಾಗಿದ್ದು, 5 ಲಕ್ಷದ ಒಳಗಿನ ಕಾಮಗಾರಿಗಳನ್ನು ಮ್ಯಾನ್ಯೂಯಲ್ ಟೆಂಡರ್ ಕರೆಯಲು ಅವಕಾಶವಿರುತ್ತದೆ ಹಾಗೂ ಸಕ್ಷಮ ಪ್ರಾಧಿಕಾರಿಗಳಾದ ಜಿಲ್ಲಾಧಿಕಾರಿಯವರಿಂದ 5 ಲಕ್ಷ ವೆಚ್ಚದ ಪೀಠೋಪಕರಣ ಖರೀದಿಗೆ ಮಂಜೂರಾತಿಯನ್ನು ಪಡೆಯಲಾಗಿರುತ್ತದೆ. ಆದರೂ ತನಿಖಾ ವರದಿಯಲ್ಲಿ ಮಂಜೂರಾತಿ ಪಡೆಯದೇ ಖರೀದಿಸಲಾಗಿದೆ ಎನ್ನುವುದು ಸರಿಯಲ್ಲ.

41. ಟೆಂಡರ್ ಪ್ರಕ್ರಿಯೆ ಮೂಲ ಕಡತದಲ್ಲಿ ಪಟ್ಟಣ ಪಂಚಾಯಿತಿಯ ಅಧ್ಯಕ್ಷರ ಆದೇಶದಂತೆ ಲಿಖಿತ ಅನುಮೋದನೆ ಪಡೆದು ದಿ: 27/07/2021 ರಂದು ನಿಯಮಾನುಸಾರ ಸಂವಿಧಾನಬದ್ಧ ಅಗತ್ಯ ತೆರಿಗೆಗಳನ್ನು ಕಟಾಯಿಸಿದ ನಂತರ ಅಧಿಕೃತ ಸರಬರಾಜುದಾರರಿಗೆ ಪಾವತಿಸಿರುವ ಬಿಲ್ಲಿನ ಮೊತ್ತಕ್ಕೆ ಸಾಮಾನ್ಯ ಸಭೆ ಮತ್ತು ಸ್ಥಾಯಿ ಸಮಿತಿ ಸಭೆಯಲ್ಲಿ ಘಟನೋತ್ತರ ಮಂಜೂರಾತಿಯನ್ನು ಪಡೆಯಲಾಗಿರುತ್ತದೆ. ಪೌರಸಭೆ ಅಧಿನಿಯಮ 43 ರಲ್ಲಿ ಅಧ್ಯಕ್ಷರ ಪ್ರಕಾರ್ಯಗಳನ್ನು ವಿವರಿಸಿದಂತೆ ಕಛೇರಿ ಟಿಪ್ಪಣಿಗಳಲ್ಲಿ ಅಧ್ಯಕ್ಷರ ಅನುಮೋದನೆ ಪಡೆದು

ತುರ್ತು ಕೆಲಸಗಳು ಮತ್ತು ತುರ್ತು ಪಾವತಿಗಳ ಪ್ರಕ್ರಿಯೆಗಳನ್ನು ನಡೆಸಿ ನಂತರ ಘಟನೋತ್ತರ ಮಂಜೂರಾತಿ ಪಡೆದುಕೊಂಡು ಸ್ಥೀರಿಕರಿಸಿಕೊಳ್ಳಲು ಅವಕಾಶವಿದ್ದು, ಅದರಂತೆ ಕ್ರಮವಹಿಸಲಾಗಿದೆ.

**42.** ಪಟ್ಟಣ ಪಂಚಾಯಿತಿಯ ಸ್ವಂತ ನಿಧಿಯಾಗಿದ್ದು, ಸದರಿ ಅನುದಾನದಿಂದ ಟೆಂಡರ್ ಮೊತ್ತ 4.99 ಲಕ್ಷವಾಗಿದ್ದು, ಅಧಿಕೃತವಾಗಿ ಪತ್ರಿಕೆಗಳಲ್ಲಿ ಟೆಂಡರ್ ಪ್ರಕಟಣೆ ಮಾಡಿ ಖರೀದಿಸಿದ್ದು, ಯಾವುದೇ ದುರುದ್ದೇಶ ಇರುವುದಿಲ್ಲ. 3 ಸರಬರಾಜುದಾರರು ಒಂದೇ ದಿನ ಹಣ ಸಂದಾಯ ಮಾಡಿರುತ್ತಾರೆಂದು ಒಪ್ಪಲು ಸಾಧ್ಯವಿರುವುದಿಲ್ಲ. ಇಡೀ ಟೆಂಡರ್ ಪ್ರಕ್ರಿಯೆಗೆ ಅದೇ ದಿನವನ್ನು ಕಡೆಯ ದಿನವನ್ನಾಗಿ ನಿಗಧಿಪಡಿಸಿರುವುದರಿಂದ ಕಾನೂನು ಪ್ರಕಾರ 3 ಜನ ಟೆಂಡರ್‌ದಾರರು ಏಕಕಾಲಕ್ಕೆ ಟೆಂಡರ್ ಸಲ್ಲಿಸಲು ಅವಕಾಶವಿರುತ್ತದೆ.

**43.** ಟೆಂಡರ್ ಪ್ರಕ್ರಿಯೆಗೆ ಅದೇ ದಿನವನ್ನು ಕಡೆಯ ದಿನವನ್ನಾಗಿ ನಿಗಧಿಪಡಿಸಿದ್ದರಿಂದ ಟೆಂಡರ್‌ದಾರರು ಏಕಕಾಲಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಮಿಸಸ್ ಚಂದ್ರ, ಹರಿಶ್ಚಂದ್ರಪುರ, ಗೋಣಿಕೊಪ್ಪಲು ಇವರು ವಿಳಾಸ ನಮೂದಿಸಿ ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ. ಟೆಂಡರ್ ನಿಯಮಾವಳಿಗಳ ಅನ್ವಯ ಟೆಂಡರ್‌ನಲ್ಲಿ ಯಶಸ್ವಿಯಾದ ಟೆಂಡರುದಾರರು ಮಾತ್ರ ನಾವು ಕೇಂದ್ರೀಕರಿಸಿ ಪತ್ರ ವ್ಯವಹಾರ ಮಾಡಲಾಗುತ್ತದೆ. ಟೆಂಡರ್ ತಿರಸ್ಕೃತವಾದ ಟೆಂಡರ್‌ದಾರರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದಿಲ್ಲ. ಆದ್ದರಿಂದ, ನೋಟೀಸುಗಳು ವಾಪಸ್ಸು ಬಂದಿರುವ ವಾದವನ್ನು ಒಪ್ಪಲು ಸಾಧ್ಯವಿಲ್ಲ. ಟೆಂಡರ್ ಪ್ರಕ್ರಿಯೆಯು ಜೂನ್ 2021 ರಲ್ಲಿ ಆಗಿದ್ದು, ತನಿಖೆಗೆ ಕರೆದಿರುವ ದಿನಾಂಕ ಏಪ್ರಿಲ್

2020 ಆಗಿರುತ್ತದೆ. ಕರೋನಾದಿಂದಾಗಿ ಅನೇಕ ವ್ಯಾಪಾರಸ್ಥರು ತಮ್ಮ ಕಛೇರಿಯನ್ನು ಮುಚ್ಚಿರಬಹುದಾಗಿರುತ್ತದೆ.

**44.** ಟೆಂಡರ್‌ನಲ್ಲಿ ಭಾಗವಹಿಸಿದ 3 ಸಂಸ್ಥೆಯವರು ಇಎಂಡಿ ಪಾವತಿಸಿದ್ದು, ಯಶಸ್ವಿ ಬಿಡ್ಡುದಾರರ ಇಎಂಡಿ ಮೊತ್ತವನ್ನು ಕಾಯ್ದಿರಿಸಲಾಗಿತ್ತು. ಯಶಸ್ವಿಯಾಗದ ಬಿಡ್ಡುದಾರರ ಮೊತ್ತವನ್ನು ಹಿಂತಿರುಗಿಸಲಾಗಿರುತ್ತದೆ. ಟೆಂಡರ್ ಫಾರ್ಮ್‌ನಲ್ಲಿ ದರ ನಮೂದಿಸಿ ಸಹಿ ಮಾಡಿರುವುದನ್ನು ಅಂಗೀಕರಿಸಲಾಗಿದೆ. ಶೀಲು ನಮೂದನ್ನು ಕಡ್ಡಾಯ ಮಾಡದ ಕಾರಣ ಸಹಿಯನ್ನು ಅಂಗೀಕರಿಸಿದೆ. ಕಾರ್ಯ ಒತ್ತಡದಿಂದ ಸಹಿ ನಮೂದಿಗೆ ಬಿಟ್ಟುಹೋಗಿರಬಹುದು. ಪುಸ್ತಕದಲ್ಲಿ ಸಹಿ ಮಾಡಲಾಗಿರುತ್ತದೆ.

**45.** ಕ್ಯಾಡ್ ಸ್ಟೇಷನ್ ರವರು ದೃಢೀಕರಣವನ್ನು ತಯಾರಿಸುವಾಗ ಕಂಪ್ಯೂಟರ್ ಮೂಲಕ ತಯಾರಿಸಿದ್ದು, ತಮ್ಮ ಸಿಬ್ಬಂದಿ ಹಳೆಯ ದಿನಾಂಕವನ್ನು ಕೈತಪ್ಪಿನಿಂದ ಸಿಸ್ಟಮ್‌ನಲ್ಲಿ ಕಾಪಿ ಪೇಸ್ಟ್ ಮಾಡಿರುವುದಾಗಿ ವಿಷಾದಿಸಿ ಬದಲಿ ದಿನಾಂಕ ತಿದ್ದುಪಡಿಯ ದೃಢೀಕರಣವನ್ನು ಸಲ್ಲಿಸಿದ್ದು, ಆಕ್ಷೇಪಣೆಯೊಂದಿಗೆ ಲಗತ್ತಿಸಲಾಗಿದೆ. ಟೆಂಡರ್ ಪ್ರಕಟಣೆ ಪ್ರಚಾರಪಡಿಸಿ ಸ್ಪರ್ಧಾತ್ಮಕವಾಗಿ ಟೆಂಡರ್ ಪ್ರಕ್ರಿಯೆ ನಡೆಸಲು ಪಟ್ಟಣ ಪಂಚಾಯತಿ ಕ್ರಮ ವಹಿಸಿದ್ದಾಗ್ಯೂ ಸಹಾ, ಸ್ಥಳೀಯ ಪೀಠೋಪಕರಣ ಸರಬರಾಜುದಾರರಿಂದ ಅಧಿಕೃತ ಟೆಂಡರ್‌ನಲ್ಲಿ ಭಾಗವಹಿಸದೆ ಅರ್ಧಕ್ಕಿಂತ ಕಡಿಮೆ ದರದಲ್ಲಿ ಸರಬರಾಜು ಮಾಡುತ್ತಿದೆ ಎಂದು ವಾದಿಸುವುದು ಅರ್ಥಹೀನವಾಗಿರುತ್ತದೆ.

46. ಪ್ರಶಾಂತ್ ಸ್ಟೀಲ್ ಮತ್ತು ವುಡ್ ಫರ್ನೀಚರ್ ರವರು ಅಧಿಕೃತ ಸರಬರಾಜುದಾರರು ಎಂಬುದಾಗಿ ನೀಡಿರುವ ಯಾವುದೇ ಸುತ್ತೋಲೆಯು ಇರುವುದಿಲ್ಲ. ಆದ್ದರಿಂದ, ಅಧಿಕೃತ ಸರಬರಾಜುದಾರರು ಎಂದು ಪರಿಗಣಿಸಲು ಬರುವುದಿಲ್ಲ. ಟೆಂಡರ್‌ನಲ್ಲಿ ಇ.ಎಂ.ಡಿ. ದರ ನಮೂದಿಸಿದಲ್ಲಿ, ಇವರ ದರವನ್ನು ಒಪ್ಪಬಹುದಾಗಿರುತ್ತದೆ. ಆದರೆ, ಟೆಂಡರ್‌ನಲ್ಲಿ ಭಾಗವಹಿಸದೆ ಕಡಿಮೆ ದರಕ್ಕೆ ಪೂರೈಸುತ್ತಿದ್ದೆ ಎಂದು ಕೊಟೇಷನ್ ನೀಡಿರುವುದು ಟೆಂಡರ್ ನಿಯಮಗಳಿಗೆ ವ್ಯತಿರಿಕ್ತವಾಗಿರುತ್ತದೆ. ಗುಣಮಟ್ಟದ ಸಾಮಗ್ರಿಗಳು ಸಾಮಾನ್ಯ ಗುಣಮಟ್ಟದ ಸಾಮಗ್ರಿಗಳ ದರದಲ್ಲಿ ವ್ಯತ್ಯಾಸವಿರುವುದು ಸರ್ವೆ ಸಾಮಾನ್ಯವಾಗಿರುತ್ತದೆ.

47. ಜನ ಸಾಮಾನ್ಯರಿಗೆ ಗುಣಮಟ್ಟವನ್ನು ಮುಚ್ಚಿ ಮರೆಮಾಡಿ ಕಳಪೆ ಗುಣಮಟ್ಟದ ಸಾಮಗ್ರಿಗಳನ್ನು ಮಾರುವುದಕ್ಕೂ ಸರ್ಕಾರದ ಇಲಾಖೆಗಳಿಗೂ ನಿಯಮಗಳನ್ವಯ ಅರ್ಜಿ ಶುಲ್ಕ ಇ.ಎಂ.ಡಿ., ಶಾಸನಬದ್ಧ ತೆರಿಗೆಗಳು, ಸಾಗಾಣಿಕೆ ಮುಂತಾದವುಗಳನ್ನು ನಿರ್ವಹಿಸಿ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಸರಬರಾಜು ಮಾಡುವುದಕ್ಕೂ ವ್ಯತ್ಯಾಸವಿರುತ್ತದೆ.

48. ಪುರಸಭೆ ಅಧಿನಿಯಮ ಕಲಂ 56ರಲ್ಲಿ ಅಧ್ಯಕ್ಷರು ಸಭೆಗಳನ್ನು ನಡೆಸುವುದು, ಮುಂದೂಡುವುದು ಅಧಿಕಾರವಿದ್ದು, ತನಿಖಾಧಿಕಾರಿಗಳು ಪ್ರಶ್ನಿಸಲು ಬರುವುದಿಲ್ಲ. ಕಲಂ 59ರಲ್ಲಿ ಸಾಮಾನ್ಯ ಸಭೆಯ ಯಾವೊಬ್ಬ ಸದಸ್ಯರು ಆಕ್ಷೇಪ ಮಾಡದಿದ್ದ ಪ್ರಯುಕ್ತ ಪೀಠೋಪಕರಣ ಖರೀದಿ ಬಗೆಯ ಪ್ರಸ್ತಾವನೆಯು ದಿ:15/04/2021 ರಂದು ಚರ್ಚಿಸಲ್ಪಟ್ಟು ಖರೀದಿಸಲು ಒಮ್ಮತ್ತದ ತೀರ್ಮಾನವಾಗಿರುತ್ತದೆ. ದಿ:15/04/2021

ರಂದು ನಡೆದ ಸಭೆಗೆ 18 ಸದಸ್ಯರು ಹಾಜರಾಗಿದ್ದು, ಸದಸ್ಯರ ಸಹಿಯನ್ನು ಅಧ್ಯಕ್ಷರ ಸಹಿ ಸೇರಿದಂತೆ ನಿಯಮಾನುಸಾರ ಪ್ರತ್ಯೇಕ ವಹಿಯಲ್ಲಿ ಪಡೆದು ನಿರ್ವಹಿಸಲಾಗಿರುತ್ತದೆ. ಆದರೆ, ನಿಯಮಗಳನ್ವಯ ಅಧ್ಯಕ್ಷರಿಗೆ ಮಾತ್ರ ನಿರ್ಣಯದ ಪುಸ್ತಕದಲ್ಲಿ ಸಹಿ ಮಾಡಲು ಅವಕಾಶವಿದ್ದು, ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳ ಸಹಿಯನ್ನು ಸಭಾ ನಡವಳಿ ಪುಸ್ತಕದಲ್ಲಿ ಪಡೆಯಲು ಅವಕಾಶವಿರುವುದಿಲ್ಲ.

49. ಹಲವು ವರ್ಷಗಳಿಂದ ಜಾರಿಯಲ್ಲಿರುವ ಸಂವಿದಾನಿಕ ಸಂಸ್ಥೆಯಾದ ಪಟ್ಟಣ ಪಂಚಾಯತಿಯ ಸಭಾ ನಡವಳಿ ಮತ್ತು ನಿರ್ಣಯ ವ್ಯವಹಾರಗಳನ್ನು ತನಿಖಾಧಿಕಾರಿಗಳು ಮುಚ್ಚಿಡುವ ಪ್ರಯತ್ನ ಎಂಬುದಾಗಿ ನಮೂದಿಸಿರುವುದು ಸಂವಿಧಾನ ವಿರೋಧಿಯಾಗಿದ್ದು, ಮುನ್ಸಿಪಲ್ ನಿಯಮಗಳಲ್ಲಿ ಕೌನ್ಸಲಿಗೆ ಇರುವ ಪರಮಾಧಿಕಾರವನ್ನು ಪ್ರಶ್ನೆ ಮಾಡುವ ಅಧಿಕಾರ ತನಿಖಾಧಿಕಾರಿಗಳಿಗೆ ಇರುವುದಿಲ್ಲ. ಪೀಠೋಪಕರಣಗಳನ್ನು ಖರೀದಿಸಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುತ್ತಾರೆ ಎಂಬುದು ಸರಿಯಲ್ಲ ಎಂಬಂತೆ ನಮೂದಿಸಿ ಆಕ್ಷೇಪಣೆ ಸಲ್ಲಿಸಿರುತ್ತಾರೆ.

50. **1ನೇ ಎದುರುದಾರರಿಂದ ದಿ: 15/12/2022 ರ ಪತ್ರ ಸ್ವೀಕರಿಸಿದ್ದು,** ಪರಿಶೀಲಿಸಲಾಗಿ ಪುರಸಭೆ ಕಾರ್ಯಾಲಯ, ವಿರಾಜಪೇಟೆಗೆ ಪೀಠೋಪಕರಣ ಖರೀದಿ ಸಂಬಂಧ ಎಲ್ಲಾ ನಿಯಮಗಳನ್ನು ಟೆಂಡರ್ ಮುಖಾಂತರ ಮಾಡಲಾಗಿರುತ್ತದೆ. ತನಿಖಾಧಿಕಾರಿಯವರು ನೀಡಿರುವ ಕಂಡಿಕೆವಾರು ವರದಿಯಲ್ಲಿ ಆರೋಪಿಸಿರುವ ಆರೋಪಕ್ಕೆ ಜಂಟಿಯಾಗಿ ಈಗಾಗಲೇ ಆಕ್ಷೇಪಣೆಯನ್ನು ಸಲ್ಲಿಸಲಾಗಿದೆ. ಪುರಸಭೆಯ ಕಿರಿಯ

ಅಭಿಯಂತರರು ನೀಡಿರುವ ಲಿಖಿತ ಹೇಳಿಕೆಯನ್ನು ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಲಾಗಿದೆ.

**51.** ಕಿರಿಯ ಅಭಿಯಂತರರು ನೀಡಿರುವ ಪತ್ರವನ್ನು ಪರಿಶೀಲಿಸಲಾಗಿ, ತನಗೆ ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಹಾಗೂ ವಿರಾಜಪೇಟೆ ಪಟ್ಟಣ ಪಂಚಾಯಿತಿಯಲ್ಲಿ ಕಿರಿಯ ಅಭಿಯಂತರರಾಗಿ ಎರಡು ಕಡೆ ಜವಾಬ್ದಾರಿ ನಿರ್ವಹಿಸುತ್ತಿದ್ದ ಕಾರಣ ಮುಖ್ಯಾಧಿಕಾರಿಗಳು ಹೇಳಿದ ಪೀಠೋಪಕರಣ ಖರೀದಿ ಕಡತವನ್ನು ತುರ್ತಾಗಿ ನಿರ್ವಹಿಸಲು ಕಾರ್ಯ ಒತ್ತಡ ಜಾಸ್ತಿ ಇದ್ದುದ್ದರಿಂದ ಖರೀದಿ ಪ್ರಸ್ತಾವನೆ ಪರಿಗಣಿಸಲು ಸಾಧ್ಯವಾಗಿರುವುದಿಲ್ಲ. ಲೋಕೋಪಯೋಗಿ ಇಲಾಖೆಯ ದರಪಟ್ಟಿಯಲ್ಲಿ ಎಲ್ಲಾ ಪೀಠೋಪಕರಣ ಖರೀದಿಯು ಲಭ್ಯವಿಲ್ಲದೇ ಇರುವುದರಿಂದ ಕೊಟೇಷನ್ ಕರೆದು ದರ ನಿಗದಿ ಪಡಿಸಿ ನಿಯಮಾನುಸಾರ ಖರೀದಿಸಬಹುದೆಂದು ಮುಖ್ಯಾಧಿಕಾರಿಗಳಿಗೆ ಸಲಹೆ ನೀಡಿರುತ್ತೇನೆ ಎಂಬಂತೆ ನಮೂದಿಸಲಾಗಿರುತ್ತದೆ.

**52.** ಕಂದಾಯ ಅಧಿಕಾರಿಯ ಅಧಿಕಾರ ಮತ್ತು ಕರ್ತವ್ಯಗಳನ್ನು ಪರಿಶೀಲಿಸಲಾಗಿ, ಪೌರಾಯುಕ್ತರ ಅಥವಾ ಮುಖ್ಯಾಧಿಕಾರಿಯ ಸಾಮಾನ್ಯ ಅಥವಾ ವಿಶೇಷ ಆದೇಶವನ್ನು ಪಾಲಿಸುವುದು, ಮುನ್ಸಿಪಾಲಿಟಿಯ ಕಂದಾಯ ಸಂಗ್ರಹಿಸುವುದು, ಆಸ್ತಿ, ವಾಹನ ತೆರಿಗೆ, ಸುಂಕ, ಜಕಾತಿ ಬಾಕಿ, ಪರವಾನಿಗೆ ಶುಲ್ಕ, ಕಟ್ಟಡ ಬಾಡಿಗೆ ಹಾಗೂ ಇತರ ಕರ್ತವ್ಯಗಳೆಂದು ನಮೂದಿಸಲಾಗಿರುತ್ತದೆ. ಆದ್ದರಿಂದ, 2ನೇ ಎದುರುದಾರರನ್ನು ಮುಖ್ಯಾಧಿಕಾರಿಗಳು ಇ-ಟೆಂಡರ್ ಕರೆಯಲು ವಿಶೇಷ ಆದೇಶ ಮಾಡಿರುವುದರಿಂದ ಸದರಿ ಆದೇಶದ ಅನ್ವಯ 2ನೇ ಎದುರುದಾರರು ಕರ್ತವ್ಯ ನಿರ್ವಹಿಸಿರುವುದು ಕಂಡುಬರುವುದರಿಂದ

2ನೇ ಎದುರುದಾರರ ಆಕ್ಷೇಪಣೆಯನ್ನು ಒಪ್ಪಬಹುದಾಗಿದ್ದು, 2ನೇ ಎದುರುದಾರರಾದ ಶ್ರೀ.ಸೋಮೇಶ್, ಕಂದಾಯ ಅಧಿಕಾರಿ, ಪಟ್ಟಣ ಪಂಚಾಯತಿ, ವಿರಾಜಪೇಟೆ, ಕೊಡಗು ಜಿಲ್ಲೆ ರವರನ್ನು ಸದರಿ ಪ್ರಕರಣದಿಂದ ಕೈಬಿಡಲಾಗಿರುತ್ತದೆ.

**53**. 1 ಮತ್ತು 3ನೇ ಎದುರುದಾರರು ಪುರಸಭೆ, ವಿರಾಜಪೇಟೆಯಲ್ಲಿ ತಮ್ಮ ಕರ್ತವ್ಯದ ಅವಧಿಯಲ್ಲಿ ಪುರಸಭೆಗೆ ಬೇಕಾದ ಟೇಬಲ್, ಕುರ್ಚಿ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ದಿ: 12/04/2021 ರಂದು ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಪಟ್ಟಿಯಲ್ಲಿ ಪುರಸಭೆಗೆ ಖರೀದಿಸಬೇಕಾಗಿರುವ ಅತೀ ಅವಶ್ಯಕ ಟೇಬಲ್, ಚೇರ್ ಇತರೆ ಸಾಮಗ್ರಿಗಳ ಸಂಬಂಧ ಸಾಮಾನ್ಯ ಸಭೆಯ ಕಾರ್ಯಸೂಚಿಯಲ್ಲಿ ಅಳವಡಿಸದೇ ಹೋಗಿರುವುದು ಕಂಡುಬರುತ್ತದೆ. ದಿ: 15/04/2021 ರ ಸಭೆಯಲ್ಲಿ ದಿ: 12/04/2021 ರ ಸಭೆಯ ನಡುವಳಿಯನ್ನು ಅನುಮೋದಿಸಿರುವುದು ಟಿಪ್ಪಣಿಗಳಿಂದ ಕಂಡುಬರುತ್ತದೆ. ಟೆಂಡರ್ ಪ್ರಕ್ರಿಯೆಯನ್ನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸದೇ ಹೋಗಿರುವುದು ಎದುರುದಾರರು ಸಲ್ಲಿಸಿರುವ ದಾಖಲೆಗಳಿಂದ ಕಂಡುಬರುತ್ತದೆ. ಇದರಿಂದ ಸ್ಥಳೀಯವಾಗಿ ಮೇಜು ಮತ್ತು ಕುರ್ಚಿಗಳನ್ನು ಸರಬರಾಜು ಮಾಡುವ ಅಂಗಡಿ ಮಾಲೀಕರು ಟೆಂಡರ್‌ನಲ್ಲಿ ಅರ್ಜಿ ಹಾಕದೇ ಹೋಗಿರುವುದು ಕಂಡುಬರುವುದರಿಂದ ತನಿಖಾ ವರದಿಯನ್ನು ಒಪ್ಪಬಹುದಾಗಿದ್ದು, 1 ಮತ್ತು 3ನೇ ಎದುರುದಾರರ ಆಕ್ಷೇಪಣೆಯನ್ನು ಒಪ್ಪಲು ಬರುವುದಿಲ್ಲ.

**54**. ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii)

ರನ್ವಯ (1) ಶ್ರೀ. ಚಂದ್ರಕುಮಾರ್, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್, ವಿರಾಜಪೇಟೆ, ಕೊಡಗು ಜಿಲ್ಲೆ ಹಾಗೂ (2) ಶ್ರೀ.ಎಂ.ಎಂ.ಶ್ರೀಧರ್, ಹಿಂದಿನ ಮುಖ್ಯಾಧಿಕಾರಿ, ಪುರಸಭೆ, ವೀರಾಜಪೇಟೆ, ಪ್ರಸ್ತುತ ಶ್ರೀರಾಮಪುರ ನಗರಸಭೆ, ಮೈಸೂರು ಜಿಲ್ಲೆ ಇವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು, ಕರ್ನಾಟಕ ನಾಗರಿಕ ಸೇವೆಗಳು(ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

**55**. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

07/01/23

[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.